# ON CASTE

# ಜಾತಿವಿಚಾರಣೆಯು

ಮೂರನೇ ಛಾಪೆ



MANGALORE
PRINTED BY STOLZ & REUTHER, BASEL MISSION PRESS.
1869

# ಜಾತಿವಿಚಾರಣೆಯು.

ಸುವಾರ್ತಿಕನೂ ಅವನ ಸಂಗಡಲಿರುವ
ದೇವದತ್ತನೆಂಬ ಹುಡುಗನೂ ಬಣಜಿಗನಾದ ಲಿಂಗಪ್ಪ
ಶೆಟ್ಟಿಯೂ ಶೌಳವನಾದ ಕೃಷ್ಣಾಚಾರ್ಯನೂ
ಮಾಡಿದ ಸಂಭಾಷಣೆಯ ಪುಸ್ತಕವು.

ಸುವಾರ್ತಿಕನು. ದೇವದತ್ತನೇ, ನೀನು ಬಹಳ ದಣಿದಿಯೋ?

ದೇವದತ್ತನು. ನೀವು ಬೇಗ ಮುಂದೆ ನಡೆದು ಹೋದಿರಿ, ನಾನು ಅಲ್ಲಿ ಕೆಳಗೆ ಇದ್ದ ಒಬ್ಬನ ಸಂಗಡ ಮಾತಾಡುತ್ತಾ ನಿಂತೆ, ತಡವಾಯಿತು. ನೀವು ಕಾಣದದರಿಂದ ಓಡುತ್ತಾ ಬಂದೆ. ದಮ್ಮು ಮೇಲೆ ಬರುತ್ತದೆ. ಈ ಘಟ್ಟವು ಬಹಳ ಎತ್ತರವಾದದ್ದು.

ಸುವಾ. ಈ ಮೋಟಿನ ಮೇಲೆ ನನ್ನ ಹತ್ತರ ಕೂತುಕೊ. ಸ್ವಲ್ಪ ವಿಶ್ರಾಂತಿಯಾದ ಮೇಲೆ ಆಚೇ ಬುಗ್ಗೆಯಿಂದ ನೀರು ಕುಡಿ. ಕೆಳಗಿನ ಶೀಮೆಯನ್ನು ನೋಡ

ಲಿಕ್ಕೆ ಮುಖ ತಿರುಗಿಸು. ಬೆಳಿಗ್ಯೆ ನಮ್ಮನ್ನು ತೋಯಿಸಿದ ಮಳೆಯ ಮೋಡಗಳು ಈಗ ಹರಿದು ಹೋಗುತ್ತವೆ, ನೋಡು, ನೋಡು!

ದೇವ. ಓ ಅಲ್ಲಿ ನಾವು ಇದ್ದ ಬಂಗಲೆಯ ಮೇಲೆ ಬಿಸಿಲು ಬಿದ್ದದ್ದು ಈ ಮರಗಳ ಸಂದಿನಿಂದ ಕಾಣುತ್ತದೆ, ನೋಡಿರಿ!

ಸುವಾ. ಅಲ್ಲಿ ಮಾತ್ರ ಬಿಸಿಲು. ಸುತ್ತಲು ಎಲ್ಲಾ ಮೋಡಗತ್ತಲೆ ತುಂಬಿಯದೆ. ಈ ಹಿಂದು ದೇಶದ ಸ್ಥಿತಿಯು ನಾವು ನೋಡುವ ಕೆಳಗಿನ ಶೀಮೆಯ ಹಾಗಿದೆ. ಸತ್ಯ ಬೆಳಕು ಕಾಣುವ ಸ್ವಲ್ಪ ಸ್ಥಳಗಳ ಹೊರ್ತು ಮತ್ತೆಲ್ಲ ವಿಗ್ರಹಾರಾಧನೆ ಎಂಬ ಕತ್ತಲೆಯಿಂದ ಮುಚ್ಚಿಯದೆ.

ದೇವ. ಮೊಬ್ಬಾದ ಮಳೆಗಾಲವು ತೀರಿದ ಮೇಲೆ ನಿರ್ಮಲ ಘಾಳಿಯ ದಿವಸಗಳು ಬರುವವು ಅಲ್ಲವೋ?

ಸುವಾ. ಬಂದಾವು, ತಪ್ಪದು.

ದೇವ. ನೋಡಿರಿ, ನಾನು ಮಾತಾಡಿ ತಡವಾದ ಆ ಬಣಜಿಗನು ಈ ಮಾರ್ಗದ ಜಾಡೆಯಿಂದ ಇಲ್ಲಿಗೆ ಏರಿ ಬರುತ್ತಾನೆ.

ಸುವಾ. ಅವನ ಸಂಗಡ ಏನು ಮಾತಾಡಿ ಬಂದಿ ಹೇಳು!

ದೇವ. ನಾನು ನಿಮ್ಮ ಹಿಂದೆ ನಡೆದು ಬರುವಾಗ್ಯೆ ಅವನು ಕೆಳಗಿನ ಆ ಹಾಳು ಮನೆಯಿಂದ ಹೊರಟು ಶ್ವಾಸ ಬಿಡುತ್ತಾ ಬಹಳ ಸಂಕಟ ಪಡುತ್ತಾ ನನ್ನ ಬದೀಲಿ ಹತ್ತಿ ಬರುತ್ತಿದ್ದನು. ಅವನು ದಣಿದು ನಿಲ್ಲುವಾಗ್ಯೆ ನಾನು ಸಹಾ ನಿಂತು, ನಿಮಗೆ ಏನು ಕಷ್ಟ ಬಂತು? ಎಂದು ಕೇಳಿದೆನು. ಅವನು ನೆಟ್ಟುಸುರಿನಿಂದ: ಅಪ್ಪಾ, ನನಗೆ ಏನು ಕಷ್ಟ ಬಂತೆಂದು ಹೇಳಲಿ! ಹಣವೆಲ್ಲಾ ಹಾಳಾದ ಮೇಲೆ ಶಿಕಾಣಿ ಇಲ್ಲದೆ ಉಪವಾಸ ಬಿದ್ದು ಹಾದಿ ನಡಿಯುವದು ಕಷ್ಟವಲ್ಲವೋ? ಎಂದನು. ನಾನು ಅವನ ಮಾತು ಕೇಳಿ, ಈ ಚೀಲದಲ್ಲಿರುವ ರೊಟ್ಟಿಗಳಲ್ಲಿ ಒಂದು ತೆಗದು, ಮುಂದೆ ಹಿಡಿದು, ಇದು ತಿನ್ನಿರಿ ಎಂದು ಹೇಳಿದೆನು. ಅವನು: ಛೀ ಛೀ! ನಾವು ಮುಟ್ಟ ಬಾರದು; ನಾನು ಬಣಜಿಗನಲ್ಲವೋ? ಹಣವೂ ಆಸ್ತಿಯೂ ಎಲ್ಲಾ ಮೋಸದಿಂದ ಹೋಯಿತು; ಜಾತಿ ಕೆಡುವದು ಮಾತ್ರ ಉಳಿದದೆ, ಅಂದನು. ಅದು ಕೇಳಿದಾಗ ನನಗೆ ನಗೆ ಬಂತು. ಆದರೆ ಅವನು ಬಹು ಲಾಚಾರಿ ಎಂದು ನಾನು ಕಕುಲತೆ ಪಟ್ಟು: ನಿಮಗೆ ಹಶಿವೆ ಆಗುವದಿಲ್ಲವೋ? ಒಂದು ರೊಟ್ಟಿ ತಿಂದರೆ, ಜಾತಿ ಕೆಟ್ಟು ಹೋಗುವದೋ? ಜೀವ ಹೋದ ಮೇಲೆ, ಜಾತಿ ಇದ್ದೇನು ಫಲ? ಎಂದು ಹೇಳಿದೆನು. ಅವನು ಶಿಟು ಮಾಡಿ:

ಎಲ್ಲಾ ಹೋಯಿತು, ಜೀವವೂ ಹೋಗಲಿ! ಅಡಜಾತಿ ಎಂದು ಬೈದನು. ಆಗ್ಯೆ ನಾನು, ಆಳುಗಳು ಬಹಳ ಮುಂದೆ ಇದ್ಧಾರೆ, ನೀವು ಸಹಾ ದೂರ ಹೋದಿರಿ ಎಂದು ಅವನನ್ನು ಬಿಟ್ಟು ಬೇಗ ಓಡುತ್ತಾ ಹತ್ತಿ ಬಂದೆ. ಅಗೋ ನೋಡಿರಿ, ಹತ್ತರ ಬಂದನು.

ಲಿಂಗಪ್ಪಶೆಟ್ಟಿಯು. ಬಸವಾ! ಬಸವಾ! ಮಹಾರುದ್ರಾ! ಶಂಭೋ! ಇಲ್ಲಿ ಕೂತು ಕೊಳ್ಳುತ್ತೇನೆ, ಅಯ್ಯಯ್ಯೋ!

ಸುವಾ. ಸ್ನೇಹಿತರೇ, ಬುಗ್ಗೆಯ ಹತ್ತರ ಕೂತು ಕೊಂಡಿರೋ? ನೀವು ಬಸವಾ, ಬಸವಾ ಅಂತ ಹೇಳುವದು ಏನು?

ಲಿಂಗ. ಬಸವಾ, ಬಸವಾ!

ಸುವಾ. ಬಸವಾ, ಬಸವಾ ಅಂದರೆ ಏನು?

ಲಿಂಗ. ಮನುಷ್ಯರೆಲ್ಲರೂ ಮೋಸಗಾರರು. ನನಗೆ ದೇವರೇ ಸಂರಕ್ಷಣೆ ಮಾಡ ಬೇಕೇ ಹೊರ್ತು ಬೇರೆ ಗತಿ ಇಲ್ಲ.

ಸುವಾ. ಜನರು ಮೋಸಗಾರರು ಎಂಬುವದು ಖರೆ; ಆದರೆ ಮೋಸಗಾರರ ಬಲೆಯಲ್ಲಿ ಬಿದ್ದರೆ, ಆ ಬಸವನು ತಪ್ಪಿಸುವದಿಲ್ಲ.—ಬಹಳ ಸಂಕಟದಲ್ಲಿ ಇದ್ಧೀರಿ. ನಿಮಗೆ ಏನು ಮೋಸವಾಯಿತು? ಯಾರು ಮಾಡಿದರು?

ಲಿಂಗ. ಏನು ಮೋಸವಾಯಿತು ಎಂದು ಹೇಳಲಪ್ಪಾ! ಹೋದ ಮಳೆಗಾಲದಲ್ಲಿ ನಾನು ಸಾವಕಾರನಾಗಿ ಬೀಡಿಕೆ ಹೇರಿ ಕೊಂಡು, ಇದೇ ಘಟ್ಟದ ಮಾರ್ಗದಿಂದ ಹೋಗಿದ್ದೆ. ಈಗ ಈ ಹರಕು ಬಟ್ಟೆ ಈ ಕೋಲು ಹೊರ್ತು ಬದಲು ಠಿಕಾಣಿ ಇಲ್ಲದೆ, ಇದೇ ಹಾದಿಯಿಂದ ತಿರಿಗಿ ಊರಿಗೆ ಹೋಗುತ್ತೇನೆ. ಇದು ಮೋಸವಲ್ಲೇನಪ್ಪಾ! ಊರಿಗೆ ಹೋದರೆ ಮಕ್ಕಳು ಅಳುವ ಹಾಗಾಯಿತು. ಅಯ್ಯಯ್ಯೋ!

ಸುವಾ. ಯಾರು ಇಂಥಾ ಮೋಸ ಮಾಡಿದರು? ಹೇಳಿರಿ! ಸಾವಕಾರರೋ? ಕಳ್ಳರೋ?

ಲಿಂಗ. ಅಲ್ಲ, ಅಲ್ಲ, ಸಾವಕಾರರೂ ಕಳ್ಳರೂ, ಎಲ್ಲರೂ ಒಳ್ಳೆಯವರು. ಆ ಬೋಳೀಗಂಡ ಚನ್ನಮುರ್ಗಿಸ್ವಾಮಿ ಮೋಸ ಮಾಡಿದನಪ್ಪಾ!

ಸುವಾ. ನಿಮ್ಮ ಸ್ವಾಮಿ ಮಾಡಿದನೋ? ಅವನಿಗೆ ಬೈಯುತ್ತೀರೋ? ನೀವು ನಿಮ್ಮ ಸ್ವಾಮಿಗಳಿಗೆ ದೇವರೆಂದು ಪೂಜೆ ಮಾಡುವದಿಲ್ಲವೋ?

ಲಿಂಗ. ಅಂಥವನಿಗೆ ದೇವರೆಂದು ಹೇಳುವವನು ಹುಚ್ಚನು. ಅವ ದೇವರಲ್ಲ, ದೆವ್ವವೇ ಸರಿ!

ಸುವಾ. ಆ ಚನ್ನಮುರ್ಗಿಸ್ವಾಮಿ ಯಾರು?

ಲಿಂಗ. ಅವನು ಮಠಪತಿ, ಕಲಿಯುಗದವ. ಜನರನ್ನು ಕೆಡಿಸುವದೇ ಹೊರ್ತು ಬದಲು ಏನೂ ಇಲ್ಲ. ಹೀಗೇ ಮಾಡಿ ಮಾಡಿ ಮಠ ತುಂಬಿಸಿ ಕೊಂಬವನು.

ಸುವಾ. ಆಹಾ, ಅವನು ನಮ್ಮ ಊರಿನಲ್ಲೇ ಇರುತ್ತಾನೆ, ಅವನೆಯೋ?

ಲಿಂಗ. ಹೌದು, ಹೌದು, ಅವನೇ.

ಸುವಾ. ಮೂಡದಿಕ್ಕಿನ ಕೆರೆಯ ಹತ್ತರ ಇರುವ ಮಠದಲ್ಲಿ ಇರುತ್ತಾನಲ್ಲವೋ? ಅವನು ಏನು ಮಾಡಿದನು? ಅವನು ಒಳ್ಳೆಯವನೂ ಧರ್ಮಿಷ್ಠನೂ ಎಂದು ಜನರು ಹೇಳುತ್ತಾರಲ್ಲ?

ಲಿಂಗ. ಅವನು ಒಳ್ಳೆಯವನೋ? ಸನ್ಯಾಸಿಯಾಗಿ ಹಾದರ ಮಾಡುವದಿಲ್ಲವೋ? ಒಬ್ಬರಿಗೆ ಘಾತ ಮಾಡುವದಿಲ್ಲವೋ? ಅವನು ಹಾಳಾಗಿ ಹೋಗಲಿ! ಕೇಳಿರಪ್ಪಾ!

ಸುವಾ. ಬೇಡ ಬೇಡ, ಶಾಪ ಕೊಡ ಬೇಡಿರಿ!

ಲಿಂಗ. ಮುಂಚೆ ನನ್ನ ಮಾತು ಕೇಳಿರಿ, ಆ ಮೇಲೆ ಹೇಳಿರಪ್ಪಾ. ನಿಮ್ಮ ಊರಿಗೆ ಬರುತ್ತಲೆ, ಮಠದ ಮುಂದೆ ಬೀಡಿಕೆ ನಿಲ್ಲಿಸಿ, ಒಳಗೆ ಹೋದೆ; ಹೋಗುವಾಗ್ಯೆ ಅವರು ಗಣಾರಾಧನೆ ಮಾಡುತ್ತಿದ್ದರು. ಒಬ್ಬ ಜಂಗಮನು ನನ್ನನ್ನು ಕಂಡು, ಅಂಗಳಕ್ಕೆ ಬಂದು: ನಿನ್ನ ತಂ

ದೆ ಶಿವಸಾಯುಜ್ಯ ಪಟ್ಟನು. ಈ ಹೊತ್ತು ಆತನ ಸಮಾಧಿ ಸಹಾ ಮಾಡಿ ಆಯಿತು. ಒಳಗೆ ಊಟಕ್ಕೆ ಬಾ ಎಂದು ಹೇಳಿದನು. ನಾನು ಒಳಗೆ ಹೋಗಿ, ಚನ್ನಮುರ್ಗಿಸ್ವಾಮಿಗೆ ಬಿನ್ನಹ ಮಾಡಿ, ತೀರ್ಥ ತಕ್ಕೊಂಡು, ತಂದೆಯ ಸಮಾಧಿಗೆ ಕಾಣಿಕೆ ಇಟ್ಟು, ಅಪ್ಪ ಸತ್ತನೆಂದು ಕಳವಳಗೊಂಡು, ಎತ್ತುಗಳ ಹೊಡ ಕೊಂಡು, ಊರೊಳಗಿನ ನಮ್ಮ ಮನೆಗೆ ಹೋದೆ. ಆಗ್ಯೆ ಬಾಗಲು ಹಾಕಿ ಮುದ್ರೆ ಮಾಡಿತ್ತು. ನಾನು ಇದೇನು ಎಂದು ಬಾಗಲ ಮುಂದೆ ನಿಲ್ಲುವಾಗ್ಯೆ, ನೆರೆಮನೆಯ ಬಸಪ್ಪನು ಹತ್ತರ ಬಂದು, ನನ್ನ ಕಿವಿಯಲ್ಲಿ: ನಿನಗೆ ಮೋಸ ಮಾಡಿದರು; ಈ ಮನೆ ಈಗ ನಿನಗೆ ಶಿಕ್ಕುವದಿಲ್ಲ; ಹಣವೆಲ್ಲಾ ತಕ್ಕೊಂಡು ಹೋದರು; ನಿನ್ನ ಅಪ್ಪ ನಿನ್ನೆ ಸತ್ತನು; ಸಾಯುವಾಗ್ಯೆ ಚನ್ನಮುರ್ಗಿಸ್ವಾಮಿಯವರೂ ಜಂಗಮರೂ ಪಟ್ಟಣಶೆಟ್ಟಿ ಸಹ ಬಂದು ಠಶ್ಯೇ ಕಾಗದದ ಮೇಲೆ ಬರೆದು, ನಿನ್ನ ತಂದೆಯ ಕ್ಯೆಯಿಂದ ಗುರುತು ಹಾಕಿಸಿದರು; ಗುರುತು ಹಾಕಿದ ಕೂಡಲೇ ಪ್ರಾಣ ಹೋಯಿತು. ರಾತ್ರಿಯೇ ಎಲ್ಲಾ ಬದುಕು ಮಠಕ್ಕೆ ಹೊರಿಸಿ, ಬೆಳಿಗ್ಯೆ ಮನೆಗೆ ಮುದ್ರೆ ಹಾಕಿಸಿ, ನಿನ್ನ ತಂದೆಯು ಮಠ ಜೀರ್ಣೋದ್ಧಾರಕ್ಕೆ ಕೊಟ್ಟನೆಂದು ಮಾಡಿ ಕೊಂಡರು ಎಂದು ಹೇಳಿದನು.

ಸುಷಾ. ಓಹೋ, ನಿನಗೆ ಮೋಸ ಮಾಡಿದರು! ಅದೆಂತೂ ಆಯಿತು, ವ್ಯಾಪಾರದಲ್ಲಿ ಸಹ ಮೋಸವಾಯಿತೋ?

ಲಿಂಗ. ಕೇಳ್ರಪ್ಪಾ! ಅಪ್ಪನ ಹಣ ಹೀಗಾಗಿ ಹೋಯಿತು. ಉಳಿದ ನನ್ನ ಹಣ ಬೇರೆ ಕಳ್ಳರಿಗೆ ಶಿಕ್ಕಿತು. ನಾನು ಆ ಮೇಲೆ ವೆಂಕಟರಮಣ ದೇವಸ್ಥಾನದ ಹತ್ತರ ಇರುವ ಬ್ರಾಹ್ಮಣ ವಕೀಲನ ಬಳಿಗೆ ಹೋಗಿ ಎಲ್ಲಾ ಹೇಳಿದೆ. ಅವನು, ನಿನ್ನ ವ್ಯಾಜ್ಯಕ್ಕೆ ಬಲ ಉಂಟು, ಫೈಸಲು ಆದೀತು ಎಂದು ಹೇಳಿ, ಕೈಫೇತು ಬರೆದು, ದಾಖಲು ಮಾಡಿದನು. ಆ ಮೇಲೆ ಕೋರ್ಟಿನಲ್ಲಿ ಇರುವ ಮುನಶಿಯವರಿಗೂ ಗುಮಾಸ್ತರಿಗೂ ಲಂಚ ಕೊಡ ಬೇಕೆಂದು ಹೇಳಿ, ತಿಂಗಳತಿಂಗಳಿಗೆ ಹಣ ತಿಂದು, ಸುಮಾರು ಎರಡು ಸಾವಿರ ರೂಪಾಯಿ ವರಿಗೆ ಖರ್ಚಿಗೆ ತೆಗದು ಕೊಂಡನು. ಇಷ್ಟು ಹಣ ಕೊಟ್ಟರೂ ನನಗೆ ಗುಣವಾಗಲಿಕ್ಕಿಲ್ಲವೆಂದು ಹೆದರಿದೆ. ಅವನು: ನೀನು ಸುಮ್ಮನಿರು, ನಿನ್ನ ವ್ಯಾಜ್ಯ ವ್ಯವಹರಿಸುತ್ತೇನೆ ಎಂದು ಹೇಳುತ್ತಾ ಬಂದ. ಮೊನ್ನೆ ನನ್ನ ನಂಬರು ಶುರುವಾಯಿತು. ಪೇದೆ ಬಂದ. ಕೋರ್ಟಿಗೆ ಹೋದೆ. ಜಂಗಮರು ನನ್ನ ವಕೀಲಗೆ ಹೆಚ್ಚು ಲಂಚ ಕೊಟ್ಟು, ಸುಳ್ಳು ಪ್ರಮಾಣ ಮಾಡಿ, ನನ್ನ ನಂ

ಬರ ಹಾಳು ಮಾಡಿ ಬಿಟ್ಟರು. ಧೊರೆಗಳು ಏನು ಬಲ್ಲ ರು? ನಾನು ಸುಳ್ಳು ಫಿರ್ಯಾದಿ ಮಾಡಿದೆನೆಂದು ಇನ್ನೂರು ರೂಪಾಯಿ ಜುರುಮಾನೆ ಮಾಡಿ, ಅಪ್ಪನ ಆಸ್ತಿ ಎಲ್ಲಾ ಆ ಕಳ್ಳ ಮಠಕ್ಕೆ ಕೊಡಿಸಿದರು. ಜುರುಮಾನೆ ಕೊಡು ವದಕ್ಕೆ ಬೀಡಿಕೆ, ಎತ್ತು, ಸಾಮಾನು, ಅಂಗಡಿ, ಜೀನಸು, ವಸ್ತ್ರ, ಹೊದಿಕೆ, ಎಲ್ಲಾ ಮಾರಿ ಹಣ ಸಲ್ಲಿಸಿದೆ. ಅಲ್ಲಿಂ ದ ಹೊರಟು, ಏನೂ ಖರ್ಚಿಗೆ ಇಲ್ಲದೆ, ಮಠಕ್ಕೆ ಹೋ ದೆ. ದೊಡ್ಡ ಹೊಟ್ಟೇ ಚನ್ನಮುರ್ಗಿಸ್ವಾಮಿ ಬಂದು, ಒಂ ದು ಚಕ್ರ ಕೊಟ್ಟ. ಕಳ್ಳ ಭೊರ್ಗಿ! ಠಿಕಾಣಿ ಇಲ್ಲದ ಬಡ ವನಾಗಿ ಈಗ ತಿರಿಗಿ ಊರಿಗೆ ಹೋಗುತ್ತೇನೆ.

ಸುವಾ. ನಿಮ್ಮ ಸ್ವಾಮಿಗಳು ಹೀಗಾದ ಮೇಲೆ ನೀ ವು ಮೋಸವನ್ನು ತಿಳಿದು ಕೊಂಡು ಅವರ ಮಾರ್ಗವ ನ್ನು ಬಿಡದೆ ಇರುವದು ಯಾಕೆ?

ಲಿಂಗ. ಅವರು ಮೋಸಗಾರರು ಖರೆ. ನೇಮನಿಷ್ಠೆ ಹೀನರಾಗಿ, ಹಣದ ಅಭಿಲಾಷೆಯಿಂದ ಜನರನ್ನು ಕೆಡಿ ಸುವದು, ಶಿಷ್ಯರಿಗೆ ಮೋಸ ಮಾಡುವದು, ಹಾದರತನ ನಡಿಸುವದು, ಇವೇ ಹೊರ್ತು ಬದಲು ಏನೂ ಇಲ್ಲಪ್ಪಾ. ಅಯ್ಯೋ ಏನು ಹೇಳಲಿ! ಊರಿಗೆ ಹೋಗಿ ಮಗಳ ಮ ದಿವೆ ಮಾಡ ಬೇಕೆಂದು ಮಾಡಿದ್ದೆ. ದುಡಿಗೆ ಠಿಕಾಣಿ

ಇಲ್ಲದ ಹಾಗೆ ಆಯಿತು. ಏನು ಮಾಡಲಪ್ಪಾ! ಆ ಚನ್ನ ಮುರ್ಗಿಸ್ವಾಮಿ ತನ್ನನ್ನು ಕಚೇರಿಗೆ ವೈದೆನೆಂದು ಜಂಗಮ ರಿಗೆ ಕಾಗದ ಬರೆದು, ನನ್ನನ್ನು ಜಾತಿಯಿಂದ ಹೊರಗೆ ಮಾಡ್ಯಾನೋ ಏನೊ. ಆದ ಮೋಸಕ್ಕಿಂತ ಈ ಮೋಸ ದೊಡ್ಡದಾದೀತಷ್ಟೆ!

ಸುವಾ. ನಿಮ್ಮನ್ನು ಕೆಡಿಸಿದವರ ಜಾತಿಯಿಂದ ಹೊ ರಗಾದರೇನು?

ಲಿಂಗ. ಜಾತಿ ಕೆಟ್ಟು ಹೋದ ಮೇಲೆ ಸತ್ತು ಹೋ ದರೆ, ನರಕವೇ ಸರಿ.

ಸುವಾ. ನರಕವನ್ನೂ ಮೋಕ್ಷವನ್ನೂ ಕೊಡುವವ ನು ದೇವರು. ಜಾತಿಯ ನೇಮಗಳನ್ನು ಮಾಡಿದವರು ಪಾಪಿಷ್ಟರಾದ ಮನುಷ್ಯರು.

ಲಿಂಗ. ಹಾಗೆ ಹೇಳ ಬಾರದು. ನಮ್ಮ ಹಿರಿಯರ ಮೇಲೆ ದೋಷವಿಲ್ಲ.

ಸುವಾ. ಹಿರಿಯರು ಈಗಿನವರಿಗಿಂತ ಒಳ್ಳೆಯವರಾ ಗಿದ್ದರು ಎಂದು ನೆನಸ ಬೇಡಿರಿ. ಈಗಿನವರು ಹಿರಿಯರ ಮಕ್ಕಳಾಗಿರುವದಿಲ್ಲವೋ? ದೇವರು ಸಕಲ ಮನುಷ್ಯರ ನ್ನು ಒಂದೇ ಜಾತಿಯಾಗಿ ನಿರ್ಮಿಸಿದ್ಧಾನೆ.

ಲಿಂಗ. ಏನು, ಏನಪ್ಪಾ? ಬಣಜಿಗರಿದ್ಧಾರೆ, ಹಾರುವ

ರು ಇದ್ದಾರೆ; ಆರೇರು, ಅಗಸಾಲೇರು, ಜಾಡರು, ಕುರುಬ ರು, ಎಥೇಷ್ಟ ಜಾತಿಯವರಿದ್ದಾರೆ; ನೀವು ಇದ್ದೀರಿ; ದೇವರು ಒಂದೇ ಜಾತಿ ನಿರ್ಮಿಸಿದ್ದಾನೆಂದು ಹೇಳುವದೇನಪ್ಪಾ?

ಸುವಾ. ನೀವು ಹೇಳಿದ ಸಕಲ ಜನರಿಗೆ ಬೇರೆ ಬೇರೆ ದೇಶವೂ ಬೇರೆ ಬೇರೆ ಕೆಲಸವೂ ಉಂಟೆಂಬದು ಸರಿ; ಆದರೆ ಎಲ್ಲರೂ ಮನುಷ್ಯರಾಗಿದ್ದಾರಲ್ಲವೋ?

ಲಿಂಗ. ಏನಪ್ಪಾ? ಮಾವಿನ ಮರ ಬೇರೆ, ಹಲಸಿನ ಮರ ಬೇರೆ, ತೆಂಗಿನ ಮರ ಬೇರೆ, ವಾಟೆಮರ, ಹುಣಸೆಮರ, ಹೀಗೆಲ್ಲಾ ಬೇರೆ ಬೇರೆ ಅಲ್ಲೇನಪ್ಪಾ? ಹಾಗೇ ಮನುಷ್ಯರ ಜಾತಿಯಲ್ಲಿ ಬೇರೆ ಬೇರೆ ಭೇದವಿಲ್ಲೇನಪ್ಪಾ? ಮೃಗಗಳಲ್ಲಿಯೂ ಹೀಗೆ ಇಲ್ಲವೋ? ಸಿಂಹವದೆ, ಹುಲಿ ಅದೆ, ಕರಡಿ ಅದೆ, ನರಿ ಅದೆ, ನಾಯಿ, ಎತ್ತು, ಕೋಣ, ಕುದುರೆ, ಆನೆ, ಎಲ್ಲಾ ಬೇರೆ ಬೇರೆ ಜಾತಿ ಅಲ್ಲವೋ? ಪಕ್ಷಿಗಳೂ ಹೀಗೆ—ಕಾಗೆ, ಗುಬ್ಬಿ, ಹೊರಶ್ಯಾ, ಹಂಗ, ಹದ್ದು, ಗಿಣಿ, ಮೈನ, ಇವೆಲ್ಲಾ ಬೇರೆ ಬೇರೆ ಜಾತಿ ಅಲ್ಲೇನಪ್ಪಾ?

ಸುವಾ. ಆಹಾ ಬಹಳ ಮಾತಾಡಿದಿರಿ. ಈಗ ನನ್ನ ಮಾತು ಕೇಳಿ ಅಲೋಚನೆ ಮಾಡಿರಿ. ಸಸಿ, ಗಿಡ, ಮರ, ಇವೆಲ್ಲಾ ಒಂದೇ ಸ್ಥಳದಲ್ಲಿ ಬೀಜದಿಂದ ಹುಟ್ಟಿ, ಬೆಳದು, ಫಲ ಕೊಟ್ಟು, ಒಣಗಿ ಬೀಳುವವು. ರಕ್ತದಿಂದ ಹುಟ್ಟು

ವ ಪ್ರಾಣಿಗಳು ಬೇರೆ. ಆ ಮರಗಳೊಳಗೆ ನಾನಾ ಜಾತಿ ಉಂಟು. ಪಕ್ಷಿಗಳ ಜಾತಿಗಳು ಬಹಳ, ಹೊಟ್ಟೆಯಿಂದ ನಡೆಯುವ ಕ್ರಿಮಿಗಳ ಜಾತಿಗಳು ಅನೇಕ. ಮರಿಗಳನ್ನು ಸಾಕಿ ಕೊಳ್ಳುವ ನಾಲ್ಕು ಕಾಲಿನ ಮೃಗ ಪಶುಗಳ ಜಾತಿಗಳೂ ಇರುತ್ತವೆ; ಇವುಗಳಲ್ಲಿ ಎರಡು ಅಪರೂಪ ಜಾತಿಗಳು ಅವೆ, ಯಾವವಂದರೆ ನಾಲ್ಕು ಕೈಗಳುಳ್ಳ ಒಂದು ಜಾತೀ ಮಂಗ, ಆ ಮರದಲ್ಲಿ ನೋಡಿರಿ. ಅದಕ್ಕೆ ಕಾಲುಗಳಿಗೆ ಬದಲಾಗಿ ಮತ್ತೂ ಎರಡು ಕೈಗಳು. ಮನುಷ್ಯರ ಜಾತಿಗೆ ಎರಡು ಕೈ ಎರಡು ಕಾಲು ಉಂಟು. ಸಕಲ ಪ್ರಾಣಿಗಳಲ್ಲಿ ಮಾತಾಡುವ ಜಾತಿ ಒಂದೇ, ಯಾವದಂದರೆ ಮನುಷ್ಯರ ಜಾತಿ. ಆಲೋಚನೆ ಮಾಡಿ ನೋಡಿ ಹೇಳಿರಿ. ಸಕಲ ಮನುಷ್ಯರಿಗೆ ಭಾಷೆ ಇಲ್ಲವೋ? ಒಂದು ತಲೆ, ಎರಡು ಕಣ್ಣು, ಎರಡು ಕಿವಿ, ಒಂದು ಮೂಗು, ಒಂದು ಬಾಯಿ, ಎರಡು ಕೈ, ಎರಡು ಕಾಲು, ಹೀಗೆಲ್ಲಾ ಇಲ್ಲವೋ? ನಾಲ್ಕು ತಲೆ, ಮೂರು ಕಣ್ಣು, ನಾಲ್ಕು ಕೈ ಉಳ್ಳವನನ್ನು ನೋಡಿದರೆ, ದೇವರು ಬೇರೆ ಜಾತಿ ಉಂಟು ಮಾಡಿದನು ಎಂಬುವದು ಆದೀತು.

ಲಿಂಗ. ಜಾತಿನೇಮಗಳು ದೇವರಿಂದ ಉಂಟಾಗಲಿಲ್ಲೇನಪ್ಪಾ?

ಸುವಾ. ಇಲ್ಲ, ಇಲ್ಲ! ದೇವರಿಂದುಂಟಾಗಲಿಲ್ಲ! ದೇವರು ಸಕಲ ಮನುಷ್ಯರಿಗೆ ಒಂದೇ ಸ್ವಭಾವವನ್ನೂ ಒಂದೇ ರೂಪವನ್ನೂ ಒಂದೇ ಮಾರ್ಗವನ್ನೂ ಮಾಡಿದ್ದಾನೆ. ದೇಶವೂ ಮರ್ಯಾದೆಯೂ ಭಾಷೆಯೂ ಬೇರೆಯಾಗಿರುವದು ಸರಿ. ಸ್ವಭಾವವೂ ರಕ್ತವೂ ಜಾತಿಯೂ ಎಲ್ಲರಿಗೆ ಒಂದೇ.

ಲಿಂಗ. ಏನು ಹೇಳುತ್ತೀರಪ್ಪಾ? ವರ್ಣವು ಬೇರೆ ಅಲ್ಲವೋ? ನೀವು ಎಲ್ಲಾ ಒಂದೇ ಮಾಡ ಬೇಕೆಂದು ಯೋಚಿಸಿದ್ಧೀರಿ, ನನಗೆ ತಿಳಿಯುತ್ತದೆ; ಅದು ಮಾತ್ರ ಆಗದು. ಕಪ್ಪು ಮನುಷ್ಯರಿಗೆ ನೀವು ಬಿಳೇ ವರ್ಣ ಮಾಡುವಿರೋ?

ಸುವಾ. ವರ್ಣವು ಏನು? ಬಿಳೇ ಎತ್ತಿಗೂ ಕಪ್ಪು ಎತ್ತಿಗೂ ಜಾತಿ ಬೇರೆ ಬೇರೆಯೋ? ಬೇರೆ ಬೇರೆ ದೇಶಸ್ಥರಿಗೆ ವರ್ಣವು ಬೇರೆ ಬೇರೆ ಹೌದು. ಅದು ಘಾಳಿಯಿಂದಲೂ ಬಿಸಿಲಿನಿಂದಲೂ ಬೇರೆ ಆಗುತ್ತದೆ. ಬಹಳ ದಿನ ಮನೆಯಲ್ಲಿದ್ದ ರೋಗ ಉಂಟಾದ ಮನುಷ್ಯನು ಮುಂಚೆಗಿಂತ ಬಿಳುಪಾಗುವನಲ್ಲವೋ? ದಿನಾಲು ಬಿಸಿಲಿನಲ್ಲೇ ಕೆಲಸ ಮಾಡುವವರು ಕಪ್ಪಾಗುತ್ತಾರಲ್ಲವೋ?

ಲಿಂಗ. ಏನಪ್ಪಾ! ಬಿಸಿಲಿನಿಂದ ಕಪ್ಪಾದವನು ಮನೆಯಲ್ಲಿ ಇದ್ದರೆ, ಮತ್ತು ಮನೆಯಲ್ಲಿ ಇದ್ದ ರೋಗದವ

ನು ಸ್ವಸ್ಥವಾಗಿ ಹೊರಗೆ ಬಂದರೆ, ಮುಂಚಿನ ವರ್ಣವು ಬರುವದಿಲ್ಲವೋ?

ಸುವಾ. ಆ ವರ್ಣವು ತಿರಿಗಿ ಬದಲಾಗುವದಿಲ್ಲವೆಂದು ನಾನು ಹೇಳಲಿಲ್ಲ. ಆದರೆ ಈಗ ಚನ್ನಾಗಿ ಕೇಳಿರಿ; ಪೂರ್ವದಾರಭ್ಯ ಛಳೀ ದೇಶದಲ್ಲಿದ್ದವರೆಲ್ಲರೂ ಬಿಳೇ ಜನರಾಗಿದ್ಧಾರೆ. ಪೂರ್ವದಾರಭ್ಯ ಬಿಸಿಲಿನ ದೇಶದಲ್ಲಿದ್ದ ಜನರು ಕಪ್ಪಾದವರು. ಆದಾಗ್ಯೂ ಛಳೀ ದೇಶದ ವಂಶದವರು ಬಿಸಿಲಿನ ದೇಶಕ್ಕೆ ಬಂದು ವಾಸ ಮಾಡಿದರೆ, ಕೆಲವು ನೂರು ವರುಷದ ಮೇಲೆ ಅವರ ವರ್ಣವು ಬದಲಾಗುವದು. ಗೋವೇ ಶೀಮೆಗೆ ಹೋಗಿದ್ಧೀರೋ? ಮುನ್ನೂರು ವರುಷದ ಹಿಂದೆ ವಿಲಾಯತಿಯಿಂದ ಬಂದ ಜನರ ಮಕ್ಕಳು ಅಲ್ಲಿ ಇದ್ಧಾರೆ. ಅವರ ವರ್ಣವು ಈ ದೇಶಸ್ಥರ ವರ್ಣದ ಹಾಗೆ ಮಸ್ಕು ಆಯಿತು. ಮತ್ತು ಉತ್ತರ ದೇಶದಿಂದ ಬಂದ ಬ್ರಾಹ್ಮಣರ ವರ್ಣವು ಬೇರೆ ಜಾತೀ ವರ್ಣಕ್ಕಿಂತ ಬದಲಾಗಿರುವದಿಲ್ಲವೋ?

ಲಿಂಗ. ಗೋವೆಗೆ ವ್ಯಾಪಾರಕ್ಕೆ ಹೋಗಿದ್ದೆ. ಅದು ಹೌದಪ್ಪಾ! ಆದರೆ ನಿಮ್ಮ ಊರಿನಲ್ಲಿ ಸಹ ಕರೇ ಬ್ರಾಹ್ಮಣರು ಇಲ್ಲವೋ? ನನಗೆ ಮೋಸ ಮಾಡಿದ ಆ ವಕೀಲನು ಹೊಲೆಯನ ಹಾಗೆ ಕಪ್ಪಾಗಿದ್ಧಾನಪ್ಪಾ!

ಸುವಾ. ಒಳ್ಳೇ ಬುದ್ಧಿಯಿಂದ ಮಾತನಾಡುತ್ತೀರಿ. ನಾನು ಹೇಳಿದ್ದು ಏನು? ಉತ್ತರ ದೇಶದಿಂದ ಬಂದವರು ಬಿಳುಪಾಗಿದ್ದಾರೆ ಎಂದು ಹೇಳಿದೆ. ಆ ತೌಳವ ಬ್ರಾಹ್ಮಣರು ಬೇರೆ ಬ್ರಾಹ್ಮಣರ ಹಾಗಲ್ಲ, ಅವರು ಈ ದೇಶದ ಮೂಲಗಾರರಾಗಿ, ನಾವು ಪರಶುರಾಮನು ಈಚೆಗೆ ಮಾಡಿದ ಬ್ರಾಹ್ಮಣರು ಎಂದು ಹೇಳಿ ಕೊಳ್ಳುತ್ತಾರೆ. ಇದರಿಂದ ನನ್ನ ಮಾತಿಗೆ ಆಧಾರ ಬರುವದು; ತಿಳು ಕೊಳ್ಳುತ್ತೀರೋ?

ಲಿಂಗ. ಅದೆಲ್ಲಾ ಬಿಡಿರಪ್ಪಾ. ನಮ್ಮ ಜಾತಿಯನ್ನು ಶಿವದೇವರು ಹುಟ್ಟಿಸಲಿಲ್ಲೇ?

ಸುವಾ. ಆ ಶಿವನು ದೇವರೆಂಬದು ಹ್ಯಾಗೆ?

ಲಿಂಗ. ಈ ಸೃಷ್ಟಿ ಶಿವನು ನಿರ್ಮಿಸಿದ್ದು, ಆತನಿಂದಲೇ ಎಲ್ಲಾ ಆದದ್ದು; ನಿಮಗೆ ತಿಳಿಯೋಕಿಲ್ಲೋ?

ಸುವಾ. ಈ ಶಿವನು ಸೃಷ್ಟಿಯನ್ನು ನಿರ್ಮಿಸಿ ಇದ್ದರೆ, ಸರ್ವತ್ರಾಣಿಯಾದ ಪರಮ ದೇವರು ಏನು ಮಾಡಿದನು?

ಲಿಂಗ. ಆ ಸರ್ವತ್ರಾಣಿಯಾದ ದೇವರನ್ನು ನಾನು ನೋಡಲಿಲ್ಲ, ಈಶ್ವರನನ್ನೇ ನೋಡಿ ತಿಳು ಕೊಂಡಿದ್ಧೇನೆ.

ಸುವಾ. ಏನು ತಿಳು ಕೊಂಡಿರಿ? ನೀವು ನೋಡಿದ್ದು ಏನು?

ಲಿಂಗ. ಏನಪ್ಪಾ, ಎರಡು ವರುಷದ ಹಿಂದೆ ನಾನು

ಉಳವೀ ಜಾತ್ರೆಗೆ ಹೋಗಲಿಲ್ಲವೋ? ಆ ಬಸವಣ್ಣದೇವರು ಹುಲ್ಲು ಮೇಯಲಿಲ್ಲೇನಪ್ಪಾ? ಅಲ್ಲಿ ಎಷ್ಟೋ ಜನ ಕೂಡುತ್ತೆ, ಎಷ್ಟೋ ಖರ್ಚಾಗುತ್ತೆ. ಸರಕಾರದವರು ಎಷ್ಟೋ ರೂಪಾಯಿ ಕೊಡುತ್ತಾರೆ. ಆ ಬಸವಣ್ಣ ದೇವರಲ್ಲವೇ? ಅದೆಲ್ಲಾ ಮೋಸವೇನಪ್ಪಾ?

ಸುವಾ. ಆಹಾ! ಹುಲ್ಲು ತಿನ್ನುವಂಥಾದ್ದು ದೇವರೋ? ಹುಲ್ಲು ಮೇಯುವದನ್ನು ನೀವು ನೋಡಿದ್ಧೀರೋ?

ಲಿಂಗ. ಹಾಗಲ್ಲ. ಪೂರ್ವದಲ್ಲಿ ಹುಲ್ಲು ಮೇಯಿತೆಂದು ಸ್ವಾಮಿಗಳೇ ನನಗೆ ಹೇಳಿದರು.

ಸುವಾ. ಭಕ್ತರು ನೋಡುವ ಹಾಗೆ ಈಗ್ಯಾಕೆ ತಿನ್ನುವದಿಲ್ಲ? ಆವಾಗ್ಯೆ ತೃಪ್ತಿಯಾಗಿ ಹೋಯಿತೋ? ಆ ಮಾತು ಚನ್ನಮುರ್ಗಿಸ್ವಾಮಿಗಳೇ ಹೇಳಿದರೋ? ಅವರು ಸತ್ಯವಂತರೋ?

ಲಿಂಗ. ಅವನು ಮೋಸಗಾರ; ಆ ಮಾತು ಬಿಡಿರಿ. ಅವನು ಸುಳ್ಳು ಹೇಳುವದೇ ಸರಿ. ಆದರೆ ಆ ಬಸವನು ಹುಲ್ಲು ಮೇಯಿದನೆಂದು ಪುರಾಣದಲ್ಲಿ ಹೇಳಲಿಲ್ಲವೇ?

ಸುವಾ. ಆ ಪುರಾಣ ನೀವು ಓದಿದ್ಧೀರೋ?

ಲಿಂಗ. ಏನ್ರಪ್ಪಾ! ನಾವು ಸತ್ತ ಬೆಳ್ಳುಳ್ಳಿ ಮಾರುವ ಬಣಜಿಗರು. ನಾವೇನು ಶಾಸ್ತ್ರಪುರಾಣ ಕಲ್ತೇವೇ?

ಸುವಾ. ಹೀಗಿದ್ದರೆ, ಹ್ಯಾಗೆ ತಿಳು ಕೊಳ್ಳುತ್ತೀರಿ? ಚನ್ನಮುರ್ಗಿಸ್ವಾಮಿ ಅಂಥವರು ಹೇಳುವ ಮಾತು ನಂಬುತ್ತೀರೋ? ನಿಮಗೆ ಬರಹ ವಿದ್ಯೆ ಕಲಿಸದೆ ಇರುವದು ಯಾಕಂದರೆ, ತಮ್ಮ ಮೋಸ ನಡಿಯುವ ಬಗ್ಯೆ. ನೀವು ಸರ್ವತ್ರಾಣಿಯಾದ ಸತ್ಯ ದೇವರನ್ನು ನೆನಸದೇ ಮರತು, ಈ ಸುಳ್ಳು ಬಸವಣ್ಣನಿಗೆ ನಂಬಿ ಜಂಗಮರ ಹೊಟ್ಟೆ ತುಂಬಿಸುತ್ತೀರಿ.

ಲಿಂಗ. ಅಯ್ಯಯ್ಯೋ! ನನಗೆ ಬಹಳ ಸಂಕಟವಾಗುತ್ತದಪ್ಪಾ! ಸಾಯುವ ದಿನವೇ ಬಂದ ಹಾಗಾಯಿತು. ನೀವು ಹೇಳುವ ಸತ್ಯ ದೇವರ ಮಾತು ಏನು? ನನ್ನನ್ನು ರಕ್ಷಿಸುವವರ್ಯ್ಯಾರು? ನನಗೆ ಎಷ್ಟೋ ಸಂಕಟ ಬಂತು.

ಸುವಾ. ನನ್ನ ಮಾತು ಹೇಳುತ್ತೇನೆ, ಮನಸ್ಸು ಕೊಟ್ಟು ಕೇಳಿರಿ. ನೀವು ಈಗ ಅನುಭವಿಸುವ ಸಂಕಟವು ಬಹಳ ದೊಡ್ಡದು ಸರಿ. ನೀವು ತಿಳಿಯದ ಮುಂದಿನ ಸಂಕಟವು ಇದಕ್ಕಿಂತ ಹೆಚ್ಚಾಗಿರುತ್ತದೆ.

ಲಿಂಗ. ಇದಕ್ಕಿಂತ ಹೆಚ್ಚು ಏನು ಸಂಕಟವಪ್ಪಾ? ಸಾಯುವದು ಮಾತ್ರ ಉಳಿದದೆ. ಅಷ್ಟಾದರೆ ಎಲ್ಲಾ ಹೌರವಾಯಿತು.

ಸುವಾ. ತೀರಿ ಹೋಗುವದು ಅಂದರೇನು? ಈ

ಲೋಕವನ್ನು ಬಿಡುವದು ಮಾತ್ರ. ಆ ಮೇಲೆ ಏನು ಗತಿ? ನಿಮ್ಮನ್ನು ರಕ್ಷಿಸುವ ಹಾಗೆ ಸತ್ಯ ದೇವರಿಗೆ ಏನು ಮಾಡಿದ್ಧೀರಿ?

ಲಿಂಗ. ಆ ದೇವರನ್ನು ತಿಳಿಯದೇ ಸೇವಿಸದೇ ಇದ್ದೆ. ಈಗ ಸಾಯುವವನಾಗಿ ನಿಮ್ಮ ಮಾತು ಕೇಳಿದರಿಂದೇನು? ಅಯ್ಯೋ ನಾನು ಕೇವಲ ಪಾಪಿಯಾಗಿದ್ಧೇನೆ. ನಿಮ್ಮಲ್ಲಿ ಒಳ್ಳೇ ಮಾತು ಇದ್ದರೆ ಹೇಳಿರಿ.

ಸುವಾ. ಕೇಳಿ ವಿಶ್ವಾಸಿಸಿದರೆ, ನಿಮಗೆ ರಕ್ಷಣ್ಯವು ಆದೀತು. ಕಿವಿ ಕೊಡಿರಿ: ಮನುಷ್ಯರೆಲ್ಲರನ್ನು ಒಂದೇ ರಕ್ತದಿಂದ ಉಂಟು ಮಾಡಿದ ಸರ್ವತ್ರಾಣಿಯಾದ ದೇವರು, ಆದಿಯಲ್ಲಿ ನಿರ್ಮಲವಾಗಿ ಹುಟ್ಟಿದ ಮನುಷ್ಯರು ತನ್ನ ವಾಕ್ಯವನ್ನು ಮೀರಿ, ಮನುಷ್ಯರ ಕಲ್ಪನೆಗಳಾದ ದೇವರುಗಳ ಸೇವೆಯನ್ನು ಸ್ಥಾಪಿಸಿ, ಗರ್ವದಿಂದಲೂ ಅನ್ಯಾಯದಿಂದಲೂ ತುಂಬಿ, ಸಮಸ್ತ ಭೂಮಿಯ ಮೇಲೆ ಚದರಿ ತಮ್ಮೊಳಗೆ ಜಾತಿ ಮೊದಲಾದ ಭೇದಗಳನ್ನುಂಟು ಮಾಡಿ, ಆದಿಯಲ್ಲಿ ನೇಮಿಸಿದ ಒಂದೇ ರಕ್ಷಣ್ಯದ ಮಾರ್ಗಕ್ಕೆ ದೂರವಾಗಿ, ಪಾಪದಲ್ಲಿಯೂ ಶಾಪದಲ್ಲಿಯೂ ಮುಣುಗಿ ಇದ್ಧಾರೆಂದು ನೋಡಿ, ಕರುಣ ಪಟ್ಟು, ಮನುಷ್ಯರ ಸಂಕಟವು ತುಂಬಾದ ಸಮಯದಲ್ಲಿ ಮನು

ಷ್ಯರ ಪಾಪವನ್ನು ಪರಿಹರಿಸುವದಕ್ಕೂ, ಸತ್ಯವನ್ನೂ ಸ
ಮಾಧಾನವನ್ನೂ ಹೊಸ್ತಾಗಿ ನಿರ್ಮಿಸಿ, ಮನುಷ್ಯರಿಗೂ
ತನಗೂ ಇರುವ ವಿರುದ್ಧವನ್ನೂ, ಮನುಷ್ಯರ ಬೇರೆ ಬೇ
ರೆ ವಂಶಗಳೊಳಗೆ ಇರುವ ಭೇದವನ್ನೂ ತೆಗದು ಹಾಕಿ,
ಭೂಲೋಕದಲ್ಲಿರುವ ಮನುಷ್ಯರಿಗೂ ಪರಲೋಕದಲ್ಲಿ
ರುವ ತನಗೂ ಒಂದೇ ಮನೆತನವಾದ ಐಕ್ಯವನ್ನು ಉಂ
ಟು ಮಾಡುವದಕ್ಕೂ, ದೇವರು ತನ್ನ ಸ್ವರೂಪವಾದ ತ
ನ್ನ ಮಗನಾಗಿರುವ ಯೇಸು ಕ್ರಿಸ್ತನನ್ನು ಈ ಲೋಕಕ್ಕೆ
ಕಳುಹಿಸಿದನು. ಈತನು ಕನ್ಯೆಯಿಂದ ಮನುಷ್ಯನಾಗಿ
ಹುಟ್ಟಿ, ಪಾಪದ ಹೊರ್ತು ನಮ್ಮ ಹಾಗೆಯೇ ಈ ಲೋ
ಕದಲ್ಲಿದ್ದು, ತಂದೆಯಾದ ದೇವರ ಕೋಪವನ್ನು ಪರಿಹರಿ
ಸುವದಕ್ಕೆ, ಪಾಪಿಷ್ಟರ ಪಾಪಕ್ಕೋಸ್ಕರ ತನ್ನ ಪ್ರಾಣವ
ನ್ನು ಓಲುಬಲಿಯಾಗಿ ಅರ್ಪಿಸಿ, ದುಷ್ಟರ ಕೈಯಿಂದ ಅ
ಸಹ್ಯವಾದ ಮರಣವನ್ನು ಪಡ ಕೊಂಡನು. ಸಮಸ್ತ
ಲೋಕದ ರಕ್ಷಣ್ಯಕ್ಕೆ ಸಮಾನವಾದ ಬಲಿಯು ಆದ ಮೇ
ಲೆ, ಆತನು ಮರಣವನ್ನು ಜಯಿಸಿ, ಮೂರನೇ ದಿವಸದ
ಲ್ಲಿ ಸಮಾಧಿಯಿಂದೆದ್ದು, ಭಯದಿಂದ ಚದರಿದ ತನ್ನ ಶಿಷ್ಯ
ರನ್ನು ತಿರಿಗಿ ಕರೆದು, ತಾನು ಸ್ಥಾಪಿಸಿದ ದೇವರ ರಾಜ್ಯ
ದ ಮಾತನ್ನು ಪೂರ್ಣವಾಗಿ ಅವರಿಗೆ ಹೇಳಿ, ಪರಲೋ

ಕಕ್ಕೆ ಏರುವಾಗ್ಯೆ ಶಿಷ್ಯರಿಗೆ: ನೀವು ಹೋಗಿ ಜಗತ್ತೆಲ್ಲಾದರಲ್ಲಿ ಇರುವ ಜನಾಂಗಗಳಿಗೆ ಸ್ನಾನ ಕೊಟ್ಟು, ನಾನು ನಿಮಗೆ ಹೇಳಿದ್ದೆಲ್ಲಾ ಕೈಕೊಳ್ಳಲಿಕ್ಕೆ ಬೋಧಿಸಿರಿ ಎಂದು ಆಜ್ಞಾಪಿಸಿದನು. ಪಾಪಿಷ್ಟರಿಗೋಸ್ಕರ ಸತ್ತು ಹೋಗಿ ಮರಣದಿಂದೆದ್ದು, ಈಗಲೂ ಸರ್ವತ್ರಾಣಿಯಾದ ದೇವರ ಬಲಪಾರ್ಶ್ವದಲ್ಲಿರುವ ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ನಾಮವನ್ನು ಕೇಳಿ, ಪಾಪಕ್ಕೋಸ್ಕರ ದುಃಖ ಪಟ್ಟು ಆತನಲ್ಲಿ ವಿಶ್ವಾಸಿಸುವವನ್ಯಾವನೋ, ಅವನು ಪಾಪಪರಿಹಾರ ಹೊಂದಿ, ಮನುಷ್ಯರ ಕಲ್ಪನೆಯಾದ ನೇಮ ಮರ್ಯಾದೆಗಳನ್ನು ಬಿಟ್ಟು, ಯೇಸು ಕ್ರಿಸ್ತನ ಭಕ್ತರು ಸಹೋದರರೆಂದು ಸ್ನೇಹಿಸಿ, ನಿತ್ಯಜೀವದ ರಾಜ್ಯವನ್ನು ಸ್ವತಂತ್ರಿಸಿ ಕೊಳ್ಳುವನು. ಶಾಸ್ತ್ರ ಪುರಾಣಗಳೂ, ಪುಣ್ಯ ಧರ್ಮ ತಪಸ್ಸುಗಳೂ ಬೇಡ. ಸತ್ಯದಿಂದ ವಿಶ್ವಾಸಿಸುವ ಪ್ರತಿ ಪಾಪಿಷ್ಟನು ಸಾಯುವ ಸಮಯದಲ್ಲಿ ಆದರೂ ಯೇಸು ಕ್ರಿಸ್ತನ ಕಡೆಗೆ ವಿಶ್ವಾಸದಿಂದ ತಿರಿಗಿ ಕೊಂಡರೆ, ನಿತ್ಯಜೀವದಲ್ಲಿ ಶೇರುವನು.

ಲಿಂಗ. ಇದು ಒಳ್ಳೇ ಮಾತಪ್ಪಾ. ಸಂಕಟ ಹೆಚ್ಚಾಗೋದು, ಜನರು ಮೋಸ ಮಾಡಿದ್ದು, ಹೌದು. ನಾನೇ ಎಷ್ಟೋ ಪಾಪ ಮಾಡಿದೆ!

ದೇವ. ಧೊರೆಯೇ! ಅವನು ಎರಡು ದಿವಸ ಉಪವಾಸ ಮಾಡಿದದರಿಂದ ಮೂರ್ಛೆ ಹೋಗುತ್ತಾನೆ. ಅವನ ಮೋರೆ ಒಣಗಿ ಹೋದದ್ದನ್ನು ನೋಡಿದಿರೋ? ಒಂದು ವೇಳೆ ಈಗ ಏನಾದರೂ ತೆಗದು ಕೊಳ್ಳುವನು.

ಸುವಾ. ಅತ್ತಲಾಗೆ ಹೋಗಿ ನೋಡು.

ಲಿಂಗ. ಓ ಹುಡುಗಾ! ನನ್ನ ಜೀವ ಹೋಗುವ ಹಾಗಾಯಿತು; ಆದರೆ ತಿನ್ನಲಾಗದು; ಭಯ ಉಂಟು.

ದೇವ. ಭಯ ಯಾಕೆ? ಸ್ವಸ್ಥದಲ್ಲಿರುವಾಗ್ಯೆ ನೀವು ಬೇಕಾದಷ್ಟು ಸಕ್ಕರೆಯೂ ಉಪ್ಪೂ ತಿನ್ನಲಿಲ್ಲವೋ? ಅವುಗಳನ್ನು ಮಾಡುವವರು ಕೆಟ್ಟ ಜಾತಿಯವರೂ ಹೊಲೆಯರೂ ಅಲ್ಲವೋ? ನಾನು ಹೊಲೆಯನಾಗಲಿ! ಮರಣಸಂಕಟದಲ್ಲಿ ಶಿಕ್ಕುವಂಥಾದ್ದು ತಿನ್ನಿರಿ. ಒಳ್ಳೇದು, ಈಗ ನೀರು ಕೊಡುತ್ತೇನೆ. ಸ್ವಲ್ಪ ಔಷಧ ಹಾಕುತ್ತೇನೆ, ಕುಡಿಯಿರಿ.

ಲಿಂಗ. ಆಹಾ ಈಗ ಸ್ವಲ್ಪ ಜೀವ ಬಂತು, ನಾನು ಬೈದರೂ ನೀವು ಉಪಕಾರ ಮಾಡಿದಿರಿ. ಪರಜಾತಿಯ ಬಡವನಾದ ನಾನು ನಿಮಗೆ ಏನು?

ದೇವ. ನೀವು ಮನುಷ್ಯರಲ್ಲವೋ? ಯೇಸು ಕ್ರಿಸ್ತನು ನಮ್ಮೆಲ್ಲರಿಗೋಸ್ಕರ ಸತ್ತು ಹೋದ ಮೇಲೆ, ಜಾತಿಭೇದ ಏನು?

ಲಿಂಗ. ದ್ಯಾವರೇ, ಸಲಾಂ ಮಾಡುತ್ತೇನೆ! ನನ್ನ ಜೀವವನ್ನು ಕಾದಿರಿ! ನೀವು ಹೇಳಿದ ಮಾತು ಚನ್ನಾಗಿ ಗ್ರಹಿಸಿ ಕೊಂಬುವ ಬಗ್ಯೆ ನನಗೆ ಬೋಧಿಸಿರಿ!

ಕೃಷ್ಣಾಚಾರ್ಯನು. ಹೋ ಈ ಬುಗ್ಗೆಯ ಹತ್ತರ ನಾಗರ ಕಲ್ಲು ಅದೆ. ಒಳ್ಳೇ ಮುಹೂರ್ತ! ನಮಸ್ಕಾರ ಮಾಡುತ್ತೇನೆ! ಸ್ವಾಮಿ ದೇವರೇ, ನಾನು ಹೋಗುವ ಕಾರ್ಯವು ಬೇಗ ಆಗಲಿ! ಇಲ್ಲಿ ಸ್ನಾನ ಮಾಡುತ್ತೇನೆ. ಓ ಇಲ್ಲಿ ಇದ್ದಾರೆ! ಪಾದ್ರಿಗಳೇ, ಇಲ್ಲಿ ಯಾಕೆ ಕೂತಿದ್ಧೀರಿ? ಯಾವ ಮೋಸ ನಡಿಸಲಿಕ್ಕೆ ಬಂದಿರಿ?

ಸುವಾ. ನಿಮಗೆ ಶಿಟ್ಟು ಯಾಕೆ? ರಾಜಮಾರ್ಗದಲ್ಲಿ ಇದ್ಧೇವೆ. ನಮ್ಮಲ್ಲಿ ಯಾವ ಮೋಸವೂ ಇಲ್ಲ.

ಕೃಷ್ಣಾ. ಆಹಾ ಮೋಸ ಇಲ್ಲ ಸರಿ! ಇವನ ಕೈಯಾಗೆ ಏನದು?

ಸುವಾ. ಅವರಿಗೆ ನೀವೇ ಕೇಳಿರಿ.

ಕೃಷ್ಣಾ. ಬಣಜಿಗಾ, ಏನೋ ಅದು? ಅವರ ಕೈಯಿಂದ ಏನು ತಿಂದಿಯೋ? ಜಾತಿ ಕೆಟ್ಟು ಅವರೊಳಗೆ ಕೂಡಿದ್ಯೋ ಏನು? ಟೋಪಿ ಇಟ್ಟು ಕೊಂಡು ಮದ್ಯಮಾಂಸಗಳು ತಿಂದು ಅವರ ಸಂಗಡ ಹೋಗು!

ಲಿಂಗ. ನಾನು ಏನು ಮಾಡಿದರೂ ನಿಮಗೆ ಏನು?

ನೀವು ನನಗೆ ಬೈಯುವದು ಯಾಕೆ? ನಿಮ್ಮಂಥವರು ದೊಡ್ಡ ದೊಡ್ಡ ಮಾತು ಆಡುವದು ಯಾಕೆ? ನಮ್ಮವರೂ ನಿಮ್ಮವರೂ ಸಹ ನನಗೆ ಈ ಪಾಟ ಕೆಡಿಸಿದರು. ಇವರಾದರೆ ನಾನು ಸಾಯದ ಹಾಗೆ ಉಪಕಾರ ಮಾಡಿದರು.

ಕೃಷ್ಣಾ. ಇವರು ನಿನಗೆ ಹೆಚ್ಚಾದ ಮೋಸ ಮಾಡಿದರು: ಜಾತಿ ಕೆಡಿಸಿದರು. ಜಾತಿ ಕೆಟ್ಟವನಿಗೆ ನರಕವೇ ಪ್ರಾಪ್ತಿಯಾಗುವದು.

ಲಿಂಗ. ಹಾಗಲ್ಲ, ಜಾತಿಭೇದ ಮಾಡಿದವರೇ ಮೋಸಗಾರರು. ದೇವರು ಮನುಷ್ಯರೆಲ್ಲರನ್ನು ಒಂದೇ ಜಾತಿಯಾಗಿ ನಿರ್ಮಿಸಿದನು. ಅವರಿಗೆ ಕೇಳಿರಿ.

ಕೃಷ್ಣಾ. ಏನು ಪಾದ್ರಿಗಳೇ? ನಿಮ್ಮ ಊರಿನಲ್ಲಿ ಜನರಿಗೆ ಕೆಡಿಸಿದ್ದು ಸಾಲದೋ? ಇಲ್ಲಿಯೂ ಬಂದು ಕೆಡಿಸುವದಕ್ಕೆ ಪ್ರಾರಂಭಿಸಿದ್ಧೀರೋ?

ಸುವಾ. ಆ ಸುದ್ದಿ ಕೇಳಿದಿರೋ? ಆ ಜನರು ಜಾತಿ ಮೊದಲಾದ ಮೋಸಗಳನ್ನು ಬಿಟ್ಟರು. ಆದರೂ ಸುಖದಿಂದಿದ್ಧಾರೆ.

ಕೃಷ್ಣಾ. ಅವರು ನೀಚರು, ಶಾಸ್ತ್ರ ತಿಳಿಯದವರು. ಬ್ರಾಹ್ಮಣರಲ್ಲಿ ಯಾರೂ ನಿಮಗೆ ಸಿಕ್ಕುವದಿಲ್ಲ. ಅಲಂಕಾರಪ್ರಿಯೋ ವಿಷ್ಣುಃ ಅಭಿಷೇಕಪ್ರಿಯಃ ಶಿವಃ ನಮಸ್ಕಾರಪ್ರಿಯೋ ಭಾನುಃ ಬ್ರಾಹ್ಮಣೋ ಭೋಜನಪ್ರಿಯಃ ||೧||

ದೇವ. ಅಮ್ಮಮ್ಮಾ, ಎಂಥಾ ಶಾಸ್ತ್ರ ಹೇಳಿದರು! ವಿಷ್ಣುವಿಗೆ ಅಲಂಕಾರ, ಶಿವನಿಗೆ ಅಭಿಷೇಕ, ಸೂರ್ಯನಿಗೆ ನಮಸ್ಕಾರ, ಬ್ರಾಹ್ಮಣನಿಗೆ ಭೋಜನಪ್ರಿಯವಾಗೆದೆ ಎಂಬುವದು ಈ ಶ್ಲೋಕದಿಂದ ನಿಮ್ಮ ಮಾತಿನ ಅಭಿಪ್ರಾಯವಾಯಿತೋ?

ಕೃಷ್ಣಾ. ಛೀ, ಸುಮ್ಮನಿರು. ನೀನು ಏನು ಬಲ್ಲೆ? ಅರ್ಥ ತಿಳಿಯದವನೇ, ನೀನು ಸಹ ಜಾತಿ ಕೆಡಲಿಲ್ಲವೋ?

ದೇವ. ಆಗಲಿ, ಐದು ಆರು ವರುಷದ ಹಿಂದೆ ಜಾತಿಯಲ್ಲಿ ಇದ್ದೆ; ಆಗ್ಯೆ ಕೆಟ್ಟವನಾಗಿ ನರಕಕ್ಕೆ ತಕ್ಕವನಾಗಿದ್ದೆ. ಈಗ ರಕ್ಷಣ್ಯವು ಶಿಕ್ಕುವ ಹಾಗಾಯಿತು. ನೀವು ಬೈಯಿರಿ, ದೇವರನ್ನು ನಂಬಿ ಸಂತೋಷದಿಂದಿದ್ಧೇನೆ.

ಸುವಾ. ನ ಶೂದ್ರಾ ಭಗವದ್ಭಕ್ತಾ ವಿಪ್ರಾ ಭಾಗವತಾಸ್ಮೃತಾಃ ಸರ್ವವರ್ಣೇಷು ತೇ ಶೂದ್ರಾ ಯೇಹ್ಯಭಕ್ತಾ ಜನಾರ್ದನೆ|| ನಿಮ್ಮ ಭಾರತದಲ್ಲಿ ಹೇಳಿದ ಈ ಮಾತು ನಿಮಗೆ ನೆನಪು ಇಲ್ಲವೋ?

ಕೃಷ್ಣಾ. ಎಲೇ ಹುಡುಗಾ, ಈ ಶ್ಲೋಕದ ಅರ್ಥ ಹೇಳು!

ದೇವ. ಅಷ್ಟು ನನಗೆ ತಿಳಿಯುವದಿಲ್ಲ.

ಸುವಾ. ಅದೇನಂದರೆ, ದೇವರ ಭಕ್ತರಾದ ಶೂದ್ರ

ರು ಶೂದ್ರರಲ್ಲ. ಉತ್ತಮ ಬ್ರಾಹ್ಮಣರು ದೇವರ ಭಕ್ತಿಹೀನರಾದರೆ, ಅವರೇ ಶೂದ್ರರು.

ಕೃಷ್ಣಾ. ಹೀಗೆ ನೀವು ಶಾಸ್ತ್ರ ತಿಳಿದವರಾದರೆ, ನಿಮ್ಮ ಸಂಗಡ ನಾನು ತರ್ಕ ಮಾಡುವೆನು. ಈ ಕಲ್ಲಿನ ಮೇಲೆ ಕುಂಡ್ರುತ್ತೇನೆ.

ಸುವಾ. ಒಳ್ಳೇದು ಕುಂಡ್ರಿ. ಎಲ್ಲಾ ಪರಿಶೋಧಿಸಿ ಒಳ್ಳೇದನ್ನು ಕೈಕೊಳ್ಳ ಬೇಕೆಂದು ದೇವರ ವಾಕ್ಯದಲ್ಲಿ ಹೇಳಿ ಅದೆ.

ಕೃಷ್ಣಾ. ನೀವು ಜನರಿಗೆ ಸಾರಿ ಹೇಳುವಂಥಾದ್ದೆಲ್ಲಾ ಸರಿ; ಒಂದು ಮಾತು ಮಾತ್ರ ಸುಳ್ಳು; ಜಾತಿಗೆ ವಿರೋಧವಾಗಿ ಹೇಳುತ್ತೀರಿ. ನಿಮ್ಮ ಮಾರ್ಗ ನಡೆದರೆ, ಜಾತಿಭೇದಗಳು ಕಾಣುವದಿಲ್ಲ. ಮನಸ್ಸಿನಲ್ಲಿ ಎಲ್ಲರೂ ದೇವರಲ್ಲಿ ವಿಶ್ವಾಸಿಸಲಿ; ಜಾತಿ ಮಾತ್ರ ಕೆಡ ಬಾರದು. ಜಾತಿನೇಮ ದೊಡ್ಡದು; ಅದು ಕೆಟ್ಟರೆ, ದೇಶವು ಹಾಳಾಗುವದು.

ದೇವ. ಒಳಗಿರುವ ನಾನಾ ವಿಧದ ಭೇದಗಳಿಂದ ರಾಜ್ಯಕ್ಕೆ ಗುಣವಾದೀತೋ? ಒಂದು ಮನೆತನದಲ್ಲಿ ಭೇದವು ಹುಟ್ಟಿದರೆ, ಅದು ಹಾಳಾಗಲಿಕ್ಕಿಲ್ಲವೋ?

ಕೃಷ್ಣಾ. ಈ ದೇಶದಲ್ಲಿರುವ ಎಲ್ಲಾ ಜನರು ಒಂದೇ ಮನೆತನ ಎಂಬುವದು ಯಾವ ಮಾತು?

ಸುವಾ. ದೇವರು ಎಲ್ಲರಿಗೆ ಒಂದೇ ಪ್ರಕಾರ ನಡಿಸುತ್ತಾನೆ. ಮಳೆ ಬಂದರೆ, ಎಲ್ಲರಿಗೂ ಸಮವಾಗಿ ಬರುತ್ತಧೆ. ಹೊಲೆಯನ ತೋಟದಲ್ಲಿರುವ ಮರವು ಬ್ರಾಹ್ಮಣನ ತೋಟದಲ್ಲಿದ್ದ ಹಾಗೆಯೇ ಫಲ ಫಲಿಸುತ್ತದೆ. ಸೂರ್ಯನ ಬಿಸುಲು ಸಮಸ್ತರ ಮೇಲೆ ಒಂದೇ ಪ್ರಕಾರ ಬೀಳುತ್ತದೆ. ಒಳ್ಳೇ ಅರಸನಾದರೆ, ಸಮಸ್ತರಿಗೂ ಒಳ್ಳೇದು. ಸರಕಾರದವರು ಕೆಟ್ಟವರಾದರೆ, ಎಲ್ಲರಿಗೂ ನಷ್ಟವು. ಜನನವೂ ಮರಣವೂ ಸಹ ಸಮಸ್ತರಿಗೂ ಸಮವಾಗಿ ಬರುತ್ತದೆ. ದೇವರು ಬೇರೆ ಬೇರೆ ಜಾತಿಯವರಿಗೆ ಬೇರೆ ಬೇರೆಯಾಗಿ ನಡಿಸುವದಿಲ್ಲ.

ಕೃಷ್ಣಾ. ಇದು ಎಲ್ಲರಿಗೂ ತಿಳಿಯುತ್ತದೆ. ದೇವರಲ್ಲಿ ಎಲ್ಲರೂ ಸಮ; ಮನುಷ್ಯರಲ್ಲಿ ಬೇರೆ ಬೇರೆ. ಜಾತಿಭೇದಗಳು ಹೀನವಾದರೆ, ರಾಜ್ಯ ಹಾಳಾಗುವದು.

ಸುವಾ. ಒಹೋ, ನಾನು ಬೇರೆ ಮಾತು ತಿಳುಕೊಂಡೆ; ಅದೇನಂದರೆ, ಐಕ್ಯದಿಂದ ಎಲ್ಲಾ ವೃದ್ಧಿಯಾಗುವದು; ಭೇದದಿಂದ ಎಲ್ಲಾ ನಾಶವಾಗುವದು. ಈ ಹಿಂದು ರಾಜ್ಯಕ್ಕೆ ಜಾತಿಭೇದಗಳಿಂದ ಏನಾಯಿತಂದರೆ: ತಮ್ಮೊಳಗೆ ಐಕ್ಯವು ಇಲ್ಲದರಿಂದ, ಪೂರ್ವದಾರಭ್ಯ ಪರದೇಶಸ್ಥರಿಗೆ ದಾಸರಾಗಿರುತ್ತಾ ಬಂದಿದ್ದಾರೆ. ಒಂದು ಕಥೆ ಹೇಳುತ್ತೇ

ನೆ. ವಿಲಾಯತಿಯಲ್ಲಿ ಪೂರ್ವಕ್ಕೆ ಒಬ್ಬ ಬುದ್ಧಿವಂತ ಅರಸನು, ತನಗೆ ಸಾವು ಸವಿಾಪಿಸಿತು ಎಂದು, ತನ್ನ ಕುಮಾರರನ್ನು ಹಾಸಿಗೆಯ ಹತ್ತರ ಕರೆಸಿ, ಅಂಬುಗಳು ತುಂಬಿದ ಬತ್ತಳಿಕೆ ತೆಗದು ಕೊಂಡು, ಆ ಅಂಬುಗಳ ಕಟ್ಟನ್ನು ಚೊಚ್ಚಲ ಮಗನಿಗೆ ಕೊಟ್ಟು ಇದನ್ನು ಮುರಿದು ಬಿಡು ಎಂದು ಹೇಳಿದನು. ಅವನು ಬಲಿಷ್ಠನಾಗಿ ಅಂಬಿನ ಕಟ್ಟು ಮೊಣಕಾಲಿಗೆ ಹಚ್ಚಿ ಮುರಿಯಲಿಕ್ಕೆ ಪ್ರಯತ್ನ ಮಾಡಿದನು, ಆಗಲಿಲ್ಲ. ಎರಡನೇ ಮೂರನೇ ಮೊದಲಾದ ಮಕ್ಕಳು ಸಹ ಮುರಿಯಲಾರದೆ ಹೋದರು. ಆ ಮೇಲೆ ಮುದುಕನಾದ ತಂದೆಯು ಆ ಕಟ್ಟು ತೆಗದು ಕೊಂಡು, ಒಂದೊಂದು ಅಂಬು ತೆಗದು ಕಷ್ಟವಿಲ್ಲದೆ ಮುರಿದು, ತನ್ನ ಕುಮಾರರಿಗೆ: ಐಕ್ಯದಿಂದ ಎಲ್ಲಾ ವೃದ್ಧಿಯಾಗುತ್ತದೆ, ಭೇದದಿಂದ ಎಲ್ಲಾ ನಾಶವಾಗುತ್ತದೆ ಎಂದು ಹೇಳಿದನು. ಆದ ಕಾರಣ ನಾನಾ ಜಾತಿಭೇದದಿಂದ ನಿಮಗೆ ನಷ್ಟವೇ ಹೊರ್ತು, ಮತ್ತೇನು ಬರುವದಿಲ್ಲ.

ಕೃಷ್ಣಾ. ಜಾತಿನೇಮವು ಸ್ಥಿರವಾಗಲಿ. ಅದು ಹೋದರೆ ಎಲ್ಲಾ ಹಾಳಾಗಲಿ!

ಸುವಾ. ಶಿಟ್ಟು ಬರುವದು ಬ್ರಾಹ್ಮಣನಿಗೆ ಯೋಗ್ಯವಾದದ್ದೋ?

ಕೃಷ್ಣಾ. ಬಿಡಿರಿ! ಬಿಡಿರಿ! ಸಮಾಧಾನದಿಂದ ಮಾತನಾಡುವ. ಈ ದೇಶದಲ್ಲಿ ನಿಮಗೆ ಕೆಲಸವೇನು? ಎಲ್ಲಾ ಒಂದೇ ಮಾಡಲಿಕ್ಕೆ ಬಂದಿರಲ್ಲವೋ?

ಸುವಾ. ಇದಕ್ಕೆ ಬಂದೆವು. ದೇವರ ವಾಕ್ಯವನ್ನು ಎಲ್ಲರಿಗೆ ಸಾರಿ ಹೇಳಿ ನರಕಲ್ಪಿತ ಮಾರ್ಗಗಳನ್ನು ತಪ್ಪಿಸಿ ಸಕಲ ಜಾತಿಯವರಿಗೆ ದೇವರು ನೇಮಿಸಿದ ರಕ್ಷಣ್ಯದ ಒಂದೇ ಮಾರ್ಗವನ್ನು ತೋರಿಸುವದಕ್ಕೆ ಬಂದೆವು.

ಕೃಷ್ಣಾ. ಸ್ವಜಾತಿ ಯಃ ಪರಿತ್ಯಜ್ಯ ಅನ್ಯ ಜಾತಿ ಪ್ರವರ್ತಕಃ ಸ ಮೂಢೋ ನರಕಂ ಯಾತಿ ಯಾವದಿಂದ್ರ ಚತುರ್ದಶಃ ||

ಸುವಾ. ಈ ಶ್ಲೋಕದ ಟೀಕು ನನಗೆ ಹೇಳಿರಿ.

ಕೃಷ್ಣಾ. ಈ ಶ್ಲೋಕದ ಅರ್ಥವು ಏನು? ಇದರಲ್ಲಿ ಬ್ರಾಹ್ಮಣರ ಜಾತಿಯೇ ಉತ್ತಮವೆಂದು ಹೇಳಿರುತ್ತದೆ.

ಸುವಾ. ಚನ್ನಾಗಿ ಹೇಳಿರಿ.

ಕೃಷ್ಣಾ. ಅಂದರೇನು? ಜಾತಿ ಕೆಟ್ಟರೆ, ಇಂದ್ರಲೋಕ ಬರುವದಿಲ್ಲ.

ಸುವಾ. ಅರ್ಥವು ತಿಳಿಯದ ಶ್ಲೋಕಗಳನ್ನು ಹೇಳಬೇಡಿರಿ. ತನ್ನ ಜಾತಿಯನ್ನು ಬಿಟ್ಟು ಅನ್ಯ ಜಾತಿಯಲ್ಲಿ ಪ್ರವರ್ತಕನಾದ ಮೂಢನು ಹದಿನಾಲ್ಕು ಇಂದ್ರರ ಪರಿ

ಯಂತರ ನರಕದಲ್ಲಿ ಬೀಳುವನು ಎಂದು ಹೇಳಿ ಅದೆ. ಈ ಮಾತು ನಮಗೆ ಏನು? ಮನುಷ್ಯರ ಜಾತಿಯನ್ನು ಬಿಟ್ಟು ಮೃಗಗಳ ಜಾತಿಯಲ್ಲಿ ಶೇರ ಬೇಕೆಂದು ನಾವು ಹೇಳುತ್ತೇವೋ?

ಕೃಷ್ಣಾ. ಇದೆಂಥಾ ಮಾತು! ಕೇಳಿದಿಯೋ ಬಣಜಿಗಾ?

ಲಿಂಗ. ನಿಮ್ಮ ಶಾಸ್ತ್ರ ನಮಗೆ ಏನು? ನಮ್ಮಲ್ಲಿ ಹೇಳಿ ಅದೆ: ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ? ಆ ಜಾತಿ ಈ ಜಾತಿ ಸ್ವಜಾತಿಯನ್ನದೆ ಶಿವನೊಲಿದಾತನೇ ಜಾತಿ ಕಾಣ್ಣೆಯ ಬಸವಣ್ಣಾ, ಅಂದದೆ ಕೇಳಿದಿರೇನಪ್ಪಾ?

ಸುವಾ. ಆಚಾರ್ಯರೇ, ಒಂದು ಮಾತು ನನಗೆ ಹೇಳಿರಿ. ಜಾತಿ ಅಂದರೇನು?

ಕೃಷ್ಣಾ. ಜಾತಿರ್ಜಾತಂಚ ಸಾಮಾನ್ಯಂ ವ್ಯಕ್ತಿಸ್ತು ಪೃಥಗಾತ್ಮತಾ । ಹೀಗಿರುತ್ತದೆ.

ಸುವಾ. ಅದೇನಂದರೆ, ಜಾತಿ ಜಾತಂ ಚ ವ್ಯಕ್ತಿ ಪೃಥಗಾತ್ಮತಾ ಈ ನಾಲ್ಕು ಹುಟ್ಟುವಿಕೆಯ ಮಾತುಗಳು. ಹೀಗಿದ್ದರೆ, ಬೇರೆ ಬೇರೆ ಜಾತಿಯಾಗಿರುವದು ಇಲ್ಲವೇ ಸಕಲ ಮನುಷ್ಯರು ತಾಯಿಯ ಗರ್ಭದಿಂದ ಹುಟ್ಟಿದವರಾಗಿರುವದರಿಂದ ಎಲ್ಲರಿಗೂ ಒಂದೇ ಜಾತಿಯಾಗಿರುವದು.

ಕೃಷ್ಣಾ. ಹೀಗೆ ನಮ್ಮಲ್ಲಿ ಇಲ್ಲ. ಮುಖ ಬಾಹೂರು ಪಜ್ಜಾನಾಂ ಪೃಥಕ್ಕರ್ಮಾಣ್ಯಕಲ್ಪಯೇತ್ । ಹೀಗೆ ಮನುವಿನ ಧರ್ಮಶಾಸ್ತ್ರದಲ್ಲಿ ಉಂಟು.

ಲಿಂಗ. ಜನರಿಗೆ ತಿಳಿಯದೆ ಇರುವ ಸಂಸ್ಕೃತ ಮಾತು ಯಾವಾಗಲೂ ಹೇಳುವದು ಏನ್ರಪ್ಪಾ, ಅದು?

ಸುವಾ. ನಿಮಗೆ ಅರ್ಥ ಹೇಳುತ್ತೇನೆ. ಮುಖದಿಂದ ಹುಟ್ಟಿದ ಬ್ರಾಹ್ಮಣರಿಗೂ ಭುಜಗಳಿಂದ ಹುಟ್ಟಿದ ಕ್ಷತ್ರಿಯರಿಗೂ ತೊಡೆಗಳಿಂದ ಹುಟ್ಟಿದ ವೈಶ್ಯರಿಗೂ ಪಾದದಿಂದ ಹುಟ್ಟಿದ ಶೂದ್ರರಿಗೂ ಬ್ರಹ್ಮದೇವರು ಬೇರೆ ಬೇರೆ ಕೆಲಸಗಳನ್ನು ನಿರ್ಮಿಸಿದ್ಧಾನೆ. ಹೀಗಲ್ಲವೋ ಆಚಾರ್ಯರೇ?

ಕೃಷ್ಣಾ. ನೀವು ಬ್ರಾಹ್ಮಣರ ಶಾಸ್ತ್ರ ಕದ್ದು ಕೊಂಡು ತಿಳಿದಿದ್ಧೀರೋ?

ಸುವಾ. ಇರಲಿ, ತಿಳು ಕೊಂಡಿದ್ಧೇನೆ. ನೀವು ಹೇಳಿದ ಮನುವಿನ ಶ್ಲೋಕವು ಸತ್ಯವೋ?

ಕೃಷ್ಣಾ. ಏನು ಹೇಳುತ್ತೀರಿ? ಅದು ಧರ್ಮಶಾಸ್ತ್ರವಲ್ಲವೋ?

ಸುವಾ. ನಿಮ್ಮ ವ್ಯಾಸನು ಮಹಾಭಾರತವನ್ನು ಬರೆದನಷ್ಟೇ, ಅವನು ಹೇಳಿದ್ದು ಅಸತ್ಯವೋ?

ಕೃಷ್ಣಾ. ಛೀ ಛೀ, ಅವನು ದಿವ್ಯ ಋಷಿ ಅಲ್ಲವೋ?

ಸುವಾ. ಒಳ್ಳೇದು, ವನಪರ್ವದಲ್ಲಿ ಇರುವ ಮತ್ಸ್ಯೋಪಾಖ್ಯಾನ ಕಥೆ ನಿಮಗೆ ತಿಳಿಯುತ್ತದೋ?

ಕೃಷ್ಣಾ. ಎಲ್ಲಾ ತಿಳಿಯುತ್ತದೆ; ಅದು ಏನು?

ಸುವಾ. ಜಲಪ್ರಳಯದಲ್ಲಿ ಸ್ಥಾವರ ಜಂಗಮವೆಲ್ಲ ನಾಶವಾಗಲಿಕ್ಕಿರುವಾಗ್ಯೆ ಏಳು ಮಹಾ ಋಷಿಗಳ ಸಂಗಡ ಹಡಗದಲ್ಲಿ ಶೇರಿದ ಸತ್ಯವ್ರತನಿಂದ ಈ ಜಗತ್ತೆಲ್ಲಾ ತಿರಿಗಿ ತುಂಬಿತು ಎಂದು ಬರೆದಿರುವದಿಲ್ಲವೋ?

ಕೃಷ್ಣಾ. ಬರದದೆ ಹೌದು, ಮತ್ತೇನು?

ಸುವಾ. ಹೀಗಿದ್ದರೆ, ಆ ಒಬ್ಬನೇ ಮೂಲತಂದೆಯಾದ ಸತ್ಯವ್ರತನಿಂದ ಹುಟ್ಟಿದ ಲೋಕದ ಜನರಿಗೆ ಜಾತಿಯ ಭೇದವು ಹ್ಯಾಗಾಯಿತು?

ಕೃಷ್ಣಾ. ನನಗಿಂತ ದೊಡ್ಡ ವಿದ್ವಾಂಸರಿಗೆ ಕೇಳಿರಿ, ಅವರು ಹೇಳ್ಯಾರು. ಏನು? ನೀವು ದೊಡ್ಡ ಶಾಸ್ತ್ರಿಗಳಾಗಿ ಬ್ರಾಹ್ಮಣರಾಗ ಬೇಕೋ?

ಲಿಂಗ. ಬೇರೆ ಜನರು ಬ್ರಾಹ್ಮಣರಾಗುವದುಂಟೇನಪ್ಪಾ?

ಸುವಾ. ಆಚಾರ್ಯರೇ, ನನ್ನನ್ನೂ ಈ ಯೌವನಸ್ಥನನ್ನೂ ನೋಡಿರಿ. ನಾವು ಸತ್ಯದ್ವಿಜರಾಗಿದ್ಧೇವೆ. ಎರಡನೇ ಜನ್ಮವನ್ನು ಹೊಂದಿದವನೇ ಹೊರ್ತು ಬೇರೆ ಯಾವನೂ ದೇವರ ರಾಜ್ಯದಲ್ಲಿ ಶೇರಲಾರನು. ಯೇಸು ಕ್ರಿಸ್ತ

ನಲ್ಲಿ ವಿಶ್ವಾಸಿಸಿ ದೇವರ ಆತ್ಮದಿಂದ ಎರಡನೇ ಹುಟ್ಟಿದವರು ಸತ್ಯದ್ವಿಜರಾಗಿದ್ದಾರೆ. ಮನುಷ್ಯರು ಮಾಡಿದ ದ್ವಿಜರಿಗೆ ಉಪನಯನದ ಹೊರ್ತು ಏನೂ ಇಲ್ಲ.

ಕೃಷ್ಣಾ. ಇದು ನಿಮ್ಮ ಮಾತು. ನಿಮ್ಮ ಶಾಸ್ತ್ರ ನಮಗೆ ಏನು ಮಾಡುತ್ತದೆ? ನಾನು ಹೇಳುವ ಮಾತು ಏನಂದರೆ: ಲೋಕದಾರಂಭದಿಂದ ನಡೆದು ಬಂದ ಜಾತಿಧರ್ಮಗಳು ಅಂತ್ಯದ ಪರಿಯಂತರ ನಡಿಯ ಬೇಕು.

ಸುವಾ. ಪೂರ್ವಧರ್ಮಗಳನ್ನು ನಿಮ್ಮಲ್ಲಿ ಬ್ರಾಹ್ಮಣರು ಸಹ ಮಿೀರುವದಿಲ್ಲವೋ? ವೇದ ಶಾಸ್ತ್ರಗಳನ್ನು ಓದುವವರು ಎಷ್ಟು ಜನರು ನಿಮ್ಮಲ್ಲಿ? ಈ ಕೆಳಗಿನ ದೇಶದಲ್ಲಿ ಕಳ್ಳು ಕುಡಿಯುವ ಬ್ರಾಹ್ಮಣರು ಇಲ್ಲವೋ? ತಮಗೆ ಹುಟ್ಟಿದ ಮಕ್ಕಳನ್ನು ಶಿಷ್ಯರಾಗ ಮಾಡುವ ಸನ್ಯಾಸಿಗಳಿಲ್ಲವೋ?

ಕೃಷ್ಣಾ. ಎಲ್ಲಾ ಸುದ್ದಿ ನಂಬ ಬೇಡಿರಿ. ಆದರೆ ಇದು ಕಲಿಯುಗ; ಕೆಟ್ಟವರೂ ಇದ್ದಾರೆ.

ಸುವಾ. ಉತ್ತಮ ಬ್ರಾಹ್ಮಣರು ಸಹ ಪೂರ್ವ ನೇಮಗಳನ್ನು ಬಿಡುತ್ತಾ ಬಿಡುತ್ತಾ ಬರಲಿಲ್ಲವೋ? ಅಶ್ವಾಲಂಬಂ ಗವಾಲಂಬಂ ಸನ್ಯಾಸಂ ಪಲಪೈತೃಕಂ ದೇವರೇಣ ಸುತೋತ್ಪತ್ತಿಃ ಕಲೌ ಪಂಚ ವಿವರ್ಜಯೇತ್ | ಇವು ಐದೂ ಬಿಟ್ಟು ಹೋಗಲಿಲ್ಲವೋ?

ಲಿಂಗ. ಹೋ ಸಾಬ್ರೆ, ನೀವು ಸಹ ಸಂಸ್ಕೃತ ಮಾತು ಮಾತಾಡುತ್ತೀರೇನಪ್ಪಾ?

ಸುವಾ. ಅಚ್ಚ ಕನ್ನಡ ಹೇಳುತ್ತೇನೆ: ಕದುರೇ ಹೋಮವು, ದನಹೋಮವು, ಸನ್ಯಾಸವು, ಮಾಂಸದಿಂದ ಶ್ರಾದ್ಧವು, ತೀರಿಹೋದ ಅಣ್ಣನ ಹೆಂಡತಿಯಲ್ಲಿ ಅವನ ತಮ್ಮನು ಮಕ್ಕಳ ಹುಟ್ಟಿಸುವದು, ಈ ಐದೂ ಈಗ ನಿಮ್ಮಲ್ಲಿ ನಡಿಯುವದೋ? ಆಚಾರ್ಯರೇ, ಹೇಳಿರಿ.

ಕೃಷ್ಣಾ. ಇದು ನಾನು ಹೇಳಲಿಲ್ಲ. ಜಾತಿಭೇದವು ಲೋಕದಾರಂಭದಾರಭ್ಯ ನಡೆದು ಬರುತ್ತದೆ ಎಂದು ಹೇಳಿದೆ.

ಸುವಾ. ಈಗಿನ ಜಾತಿಭೇದಗಳು ಆದಿ ಆರಂಭದಿಂದ ಇದ್ದವೋ?

ಕೃಷ್ಣಾ. ಆದಿ ಆರಭ್ಯ ಇದ್ದದ್ದು ಹೌದು.

ಸುವಾ. ಈ ಮಾತು ನನಗೆ ಆಶ್ಚರ್ಯ ಕಾಣುತ್ತದೆ. ಸಹವಾಸಿಕರೆಂಬವರು ಇದ್ಧಾರೋ?

ಕೃಷ್ಣಾ. ಇದ್ಧಾರೆ, ಅವರ ಸಂಗಡ ಪಙ್ತಿ ಊಟ ಮಾಡುವದಿಲ್ಲ.

ಸುವಾ. ಇವರು ಲೋಕದಾರಂಭದಾರಭ್ಯ ಇದ್ದವರೋ?

ಕೃಷ್ಣಾ. ಅವರು ಮೊದಲು ಬ್ರಾಹ್ಮಣರೇ. ಆ ಮೇಲೆ ಜಾತಿ ಕೆಟ್ಟವರ ಸಹವಾಸ ಮಾಡಿದ್ದರಿಂದ ಬೇರೆಯಾದರು.

ಸುವಾ. ಪದಾರ್ಥಿಗಳನ್ನು ನೋಡಿದ್ಧೀರೋ?

ಕೃಷ್ಣಾ. ಅವರು ಎಂಥಾ ಬ್ರಾಹ್ಮಣರು?

ಸುವಾ. ಬ್ರಾಹ್ಮಣರಾಗಿದ್ಧಾರೆ.

ಕೃಷ್ಣಾ. ಓ ಏನು? ಅವರು ಎಂಥವರು? ಶಂಕರಾಚಾರ್ಯರಿಗೆ ಒಬ್ಬ ಶೂದ್ರನು ಸ್ನಾನಕ್ಕೆ ಗೋಮಯ ತಂದು ಕೊಟ್ಟದರಿಂದ ಆ ಶಂಕರಾಚಾರ್ಯರ ಆಶೀರ್ವಾದದಿಂದ ಪುನೀತನಾದ ಆ ಶೂದ್ರನ ಮಕ್ಕಳು.

ಸುವಾ. ನೀವು ಯಾವ ಊರಿನವರು?

ಕಷ್ಣಾ. ನಾನು ಉಡುಪೀ ಬ್ರಾಹ್ಮಣನು. ಹೋದ ವರುಷದ ಜಾತ್ರೆಯಲ್ಲಿ ನೀವು ನನ್ನ ಮನೆಯ ಹತ್ತರ ನಿಂತು ಕೊಳ್ಳಲಿಲ್ಲವೋ?

ಸುವಾ. ಅಲ್ಲಿ ಸ್ಥಾನಿಕರು ಇದ್ಧಾರಲ್ಲವೋ?

ಕೃಷ್ಣಾ. ಬಹಳ ಜನರಿದ್ಧಾರೆ.

ಸುವಾ. ಅವರ ಜಾತಿ ಲೋಕದಾರಂಭದಾರಭ್ಯ ನಡೆದು ಬಂದದ್ದೋ?

ಕೃಷ್ಣಾ. ಏನು? ಅವರು ಬೇರೆ, ಅಷ್ಟ ಪಙ್ತಿಯವರು.

ಸುವಾ. ಅದು ಹ್ಯಾಗೆ?

ಕೃಷ್ಣಾ. ಆಹಾ ಅವರು ಹೊಲೆಯನಾದ ಉಬ್ಬಾಶೀ ಅರಸನ ಕಾಲದಲ್ಲಿ ಅವನ ಚಾಕರಿ ಮಾಡಿ ಅಶುದ್ಧರಾದದರಿಂದ ಬೇರೆಯಾಗಿ ಸ್ಥಾನಿಕರು ಎಂದು ಹೇಳಿಸಿಕೊಂಡರು.

ಸುವಾ. ಈ ಘಟ್ಟದ ಬುಡದಲ್ಲಿ ಚಿತ್ತಪಾವನ ಬ್ರಾಹ್ಮಣರು ನೂರು ಮನೆಗಳಾಗಿ ಇದ್ದಾರೆ. ಅವರ ಉತ್ಪತ್ತಿ ನಿಮಗೆ ತಿಳಿದದೆಯೋ?

ಕೃಷ್ಣಾ. ಸುಮಾರು ತಿಳಿದದೆ. ಪರಶುರಾಮದೇವರು ಋಷಿಗಳಿಗೆ ಊಟಕ್ಕೆ ಹೇಳಿದನು. ಅವರು ತಡ ಮಾಡಿದರಿಂದ ಬ್ರಾಹ್ಮಣರು ಊಟಕ್ಕೆ ಬೇಕೆಂದು ಆ ಪರಿಸ್ತರಣಗಳನ್ನೇ ಬ್ರಾಹ್ಮಣರಾಗ ಮಾಡಿದನು. ಹೀಗಲ್ಲವೋ?

ಸುವಾ. ಹೌದು. ಆ ಕಾರಣ ಅವರಿಗೆ ಚಿತ್ತಪಾವನರೆಂದು ಹೆಸರಾಯಿತು. ಪರಶುರಾಮನ ಚಿತ್ತದಿಂದ ಉಂಟಾದದರಿಂದಲೇ ಇವರು ಮತ್ತು ಹಿಂದೆ ಹೇಳಿದ ಬ್ರಾಹ್ಮಣರು ಸಹ ಪರಶುರಾಮನ ಸೃಷ್ಟಿ ಆದ ಮೇಲೆ ಉಂಟಾದವರು. ಇನ್ನೂ ಚಿತ್ರಾಂಗದರಾಯನ ಕಾಲದಲ್ಲಿ ಯಾತ್ರೆಗೆ ಹೋದ ಬ್ರಾಹ್ಮಣರಿಂದ ನಾನಾ ವಿಧದ ಜಾತಿಗಳು ಹುಟ್ಟಲಿಲ್ಲವೋ?

ಲಿಂಗ. ಆಹಾ ಜಾತಿಗಳು ಹುಟ್ಟಿದ ಮಾರ್ಗವು ನನಗೆ ಕಾಣುವದು.

ಕೃಷ್ಣಾ. ಎಲೋ ಬಣಜಿಗಾ, ನೀ ಸುಮ್ಮನಿರು. ನಿನಗೆ ಏನು ತಿಳಿಯುತ್ತದೆ? ಪಾದ್ರಿಗಳೇ, ಒಂದು ಮಾತು ಕೇಳಿರಿ; ನೀವು ಹೇಳಿದವರೆಲ್ಲರೂ ನಮ್ಮ ಜಾತಿಯ ಹಾಗಲ್ಲ, ಈಚೆಗೆ ಹುಟ್ಟಿದವರು ಹೌದು.

ಸುವಾ. ನೀವು ತೌಳವ ಬ್ರಾಹ್ಮಣರು ಅಲ್ಲವೋ?

ಕೃಷ್ಣಾ. ನಾನು ತೌಳವನಾದ ವೈಷ್ಣವ ಹೌದು.

ಸುವಾ. ಇನ್ನೊಂದು ಶ್ಲೋಕ ಕೇಳ ಬೇಕು: ಕದಾನ್ನಭೋಜನೋಯೂಯಂ ಚೇಲಖಂಡಧರಾಭುವಿ | ಅಪ್ರಬುದ್ಧಾಹ್ಯನಾಸ್ವಾದಾ ಶ್ಲಾಘನೀಯಾ ಭವಿಷ್ಯಥಾಃ || ನೆನಪುಂಟೋ?

ಕೃಷ್ಣಾ. ನಿಮಗೆ ತಿಳಿದದೋ? ಅದು ಪರಶುರಾಮನ ಶಾಪವು. ಅವನು ಈ ದೇಶದ ಸೃಷ್ಟಿ ಮಾಡಿ ನಮ್ಮನ್ನು ಸ್ಥಾಪಿಸಿದನು.

ಸುವಾ. ಸರಿ. ಅವನು ಮೀನುಗಾರರನ್ನು ಹಿಡಿದು, ಅವರ ಬಲೆಗಳನ್ನು ಬಿಚ್ಚಿ, ಅವರ ಕೊರಳಿಗೆ ಆ ನೂಲನ್ನು ಹಾಕಿ, ಉಪನಯನವೆಂದು ಅವರನ್ನು ಬ್ರಾಹ್ಮಣರಾಗ ಮಾಡಿದನು ಎಂದು ನಿಮ್ಮಲ್ಲಿ ಬರೆದದೆ, ಅಲ್ಲವೋ?

ಕೃಷ್ಣಾ. ಹೌದು. ನಮ್ಮ ಜಾತಿ ದೇವರಿಂದುಂಟಾಯಿತು; ಆ ಮೇಲೆ ಅವರು ಪಾಪ ಮಾಡಿದದರಿಂದ, ಆತನು ಶಾಪ ಕೊಟ್ಟು: ಕೆಟ್ಟ ಅನ್ನ ಭೋಜನ ಮಾಡಿ, ಅರ್ಧ ವಸ್ತ್ರ ಧರಿಸಿ, ಬುದ್ಧಿ ಹೀನರಾಗಿ, ಮಾನ ಇಲ್ಲದವರಾಗಿರಿ ಎಂದು ಹೇಳಿದನು. ಈ ದೇಶವು ವರುಣದೇವರು ಪರಶುರಾಮ ದೇವರಿಗೆ ಕೊಟ್ಟದ್ದು. ಇದು ಉತ್ತಮ ದೇಶವಲ್ಲವೋ?

ಸುವಾ. ಆ ಶ್ಲೋಕದ ಅಭಿಪ್ರಾಯ ನೀವೇ ಹೇಳಿದಿರಿ. ಈ ಕೆಳಗಿನ ದೇಶವು ಮೊದಲು ಸಮುದ್ರದ ನೆಲವಾಗಿತ್ತೆಂದು, ಘಟ್ಟಗಳ ಬುಡದ ಪರಿಯಂತರ ಇರುವ ಉಸುಬಿನಿಂದಲೂ ಇಟ್ಟಿಗೆ ಕಲ್ಲಿನಿಂದಲೂ ಕಾಣುವದು. ಅದು ಹೌದು. ಆದರೆ ಉಳಿದ ಕಥೆಯನ್ನು ವಿಚಾರಿಸಿದರೆ, ಪರಶುರಾಮನು ಮಿಕ್ಕಾದ ದೇಶವನ್ನು ಬ್ರಾಹ್ಮಣರಿಗೆ ಕೊಟ್ಟ ಮೇಲೆ, ಆ ಮೀನುಗಾರರನ್ನು ತೌಳವ ಬ್ರಾಹ್ಮಣರಾಗ ಮಾಡಿದದರಿಂದ, ನೀವು ಸಹ ಈಚೆಯವರು ಎಂದು ಕಾಣುವದಿಲ್ಲವೋ?

ಕೃಷ್ಣಾ. ಇರಲಿ, ನೀವು ಹೇಳುವದು ನಿಮಗೆ ಆದೀತು. ನಮಗೆ ದೋಷವಿಲ್ಲ. ನಿಮ್ಮ ಮಾತು ಸತ್ಯವಾಗಿದ್ದರೆ, ನಮ್ಮ ಜಾತೀ ಉತ್ಪತ್ತಿಯ ಹಿಂದೆ ಋಷಿಗಳ ಮಕ್ಕಳಾದ ಬ್ರಾಹ್ಮಣರು ಲೋಕದಾರಂಭದಿಂದ ಅಹಿಕ್ಷೇತ್ರ ಮೊದ

ಲಾದ ಸ್ಥಳಗಳಲ್ಲಿ ವಾಸವಾಗಿದ್ದರೆಂದು ಕಾಣುವದಿಲ್ಲ ವೋ? ನೀವೇ ಹೇಳಿರಿ.

ಸುವಾ. ಹೇಳುತ್ತೇನೆ; ಸಮಾಧಾನದಿಂದ ಕಿವಿ ಕೊಡಿರಿ. ಕೆಳಗೆ ನೋಡಿರಿ. ಕತ್ತಲೆಯ ತಗ್ಗಿನಲ್ಲಿ ಹರಿಯುವ ನೀರಿನ ಧಡದಲ್ಲಿ ಬೇರೂರಿದ ದೊಡ್ಡ ಮರಗಳು ನಮ್ಮ ಕೈಗೆ ಶಿಕ್ಕುವ ಹಾಗೆ ಮೇಲೆ ಬಂದದ್ದು ಕಾಣುತ್ತದೋ?

ಕೃಷ್ಣಾ. ಅವು ಬಹಳ ಪೂರ್ವಕಾಲದ್ದು. ಆ ಬಣಜಿಗನು ಕೂತ ಹಿಂದೆ ಇರುವ ಮರ ನೋಡಿರಿ. ಆಕಾಶದ ಪರಿಯಂತರ ಮುಟ್ಟುವ ಹಾಗೆ ಕಾಣುತ್ತದೆ. ಆದರೆ ಈ ಮಾತು ಯಾಕೆ ಹೇಳಿದಿರಿ?

ಸುವಾ. ಈ ಮರಗಳು ಲೋಕದಾರಂಭದಾರಭ್ಯ ಇದ್ದವೋ?

ಕೃಷ್ಣಾ. ನಾನು ಹೇಳಿದ ಮಾತಿಗೆ ಮೊದಲು ಉತ್ತರ ಕೊಡಿರಿ. ನೀವು ಹೀಗೆ ಹೇಳುವದು ಯಾಕೆ? ಈ ದೊಡ್ಡ ಮರಗಳಲ್ಲಿ ಘಾಳಿಯಿಂದ ಬಿದ್ದ ಒಂದರಲ್ಲಿ ನೀವು ಕೂತು ಕೊಳ್ಳಲಿಲ್ಲವೋ? ಇಲ್ಲಿ ಕೆಲವು ಸಣ್ಣ ಮರಗಳು ಮೊನ್ನೆ ಹುಟ್ಟಿದವು. ಇವು ನೂರು ವರುಷದ ಮೇಲೆ ಅದರ ಹಾಗೆಯೇ ಬೆಳದು ಬಿದ್ದಾವು. ಈಗ ನಿಮ್ಮ ಮಾತು ಹೇಳಿರಿ. ತಪ್ಪಿತೋ?

ಸುವಾ. ತಪ್ಪಲಿಲ್ಲ. ಈಗಿನ ಬ್ರಾಹ್ಮಣರು ಮೊದಲಾದ ಜಾತಿಗಳು ಹ್ಯಾಗೆ ಹುಟ್ಟಿದವೆಂಬದು ನೀವೇ ನನಗೆ ಹೇಳಿರಿ. ಈಚೆಗಾದ ಜಾತಿಗಳ ಉತ್ಪತ್ತಿಯನ್ನು ತಿಳಿದವನು ಪೂರ್ವದಲ್ಲಿ ಆದ ಜಾತಿಯ ಉತ್ಪತ್ತಿಯನ್ನು ತಿಳಿಯದೇ ಇರುವನೋ? ಪೂರ್ವಕಾಲದ ಚರಿತ್ರವು ಗೊತ್ತಾಗಿದ್ದರೆ, ಈ ಮಾತು ಚನ್ನಾಗಿ ಪ್ರತ್ಯಕ್ಷವಾಗುತ್ತಿತ್ತು. ಪೂರ್ವ ಚರಿತ್ರದ ತಿಳುವಿಕೆಯು ನಿಮ್ಮಲ್ಲಿ ಇಲ್ಲ. ಸತ್ಯ ಚರಿತ್ರವನ್ನು ಸತ್ಯ ಮನಸ್ಸಿನಿಂದ ವಿಚಾರಿಸಿ ಕೊಂಬುವವನು ಬ್ರಾಹ್ಮಣರಲ್ಲಿ ಯಾವನೂ ಇಲ್ಲ. ಜನರು ಅಜ್ಜನ ಕಾಲದ ಹಿಂದೆ ಆದದ್ದೇ ತಿಳಿಯಲಿಲ್ಲ; ಆದದರಿಂದ ಬಹು ಪೂರ್ವ ಕಾಲದಲ್ಲಿ ಆದ ಕಾರ್ಯಗಳ ವಿಷಯ ಏನೇನಾದರೂ ಸುಮ್ಮನೇ ಹೇಳುವದಕ್ಕೆ ಈ ದೇಶದಲ್ಲಿ ಬೈಲುಮಾರ್ಗ ಉಂಟು. ಆದಾಗ್ಯೂ ಸಣ್ಣ ಮರಗಳ ಹುಟ್ಟುವಿಕೆಯನ್ನು ತಿಳಿದವನು ಪೂರ್ವ ಮರಗಳ ಹುಟ್ಟುವಿಕೆಯೂ ಹೀಗೇ ಸರಿ ಎಂದು ತಿಳು ಕೊಳ್ಳುವನು. ಈಚೆಗೆ ಹೊಸ್ತಾಗಿ ಆದ ಜಾತಿಗಳು ಇನ್ನೂ ಸಾವಿರಾರು ವರುಷದ ಮೇಲೆ ಅವು ಲೋಕದಾರಂಭದಾರಭ್ಯ ಇದ್ದವೆಂದು ಹಿಂದು ಜನರು ಸುಮ್ಮನೇ ಹೇಳುವರಲ್ಲವೋ?

ಕೃಷ್ಣಾ. ಅಹಾ ನನಗೆ ಮೋಸವಾಯಿತು. ನನ್ನ ಕ

ರ್ಮಾನುಸಾರ! ನಾನು ಯಾಕೆ ಇಲ್ಲಿ ಕೂತು ಕೊಂಡು ಸುಮ್ಮನೇ ಮಾತಾಡಿದೆ?

ಲಿಂಗ. ಎಲೇ ಹಾರ್ವಾ! ನಿನ್ನ ಮಾತು ಹೋಯಿ ತೇನಪ್ಪಾ? ನಾನು ತಿಳು ಕೊಂಡೆ. ಅವರು ಹೇಳುವದು ಸತ್ಯವೇ ಸರಿ. ಹಿರೇರ ಮೋಸದಿಂದಲೂ ಈಗಿನವರ ಮೋಸದಿಂದಲೂ ಕೆಟ್ಟು ಹೋದೆವು.

ಕೃಷ್ಣಾ. ಛೀ ಛೀ, ಬಣಜಿಗಾ! ನಾವು ಇವರ ಮಾ ತಿನಿಂದಲೇ ಕೆಟ್ಟು ಹೋಗುವದು. ಕೆಟ್ಟು ಹೋಗುವ ನ ಮ್ಮ ಜಾತಿ ಸುಟ್ಟ ಮರದ ಮೋಟಿನ ಹಾಗೆ ಎಂದು ಇ ವರು ಕೂತು ಹಾಸ್ಯ ಮಾಡುತ್ತಾರೆ.

ಸುವಾ. ನಾನು ಹಾಸ್ಯ ಮಾಡುವದಿಲ್ಲ, ಕರುಣ ಪಡುತ್ತೇನೆ. ಹೋದ ವರುಷದ ಜಾತ್ರೆಯಲ್ಲಿ ನಿಮ್ಮ ಮ ನೆಯ ಮುಂದೆ ಜನರಿಗೆ ಮಾಡಿದ ಪ್ರಸಂಗವನ್ನು ನೀವು ಕೇಳಲಿಲ್ಲವೋ? ಆಗ್ಯೆ ನಿಮಗೆ ಸ್ಪಷ್ಟವಾಗಿ ಎಲ್ಲಾ ಹೇಳ ಲಿಲ್ಲವೋ?

ಕೃಷ್ಣಾ. ಓ ಆವಾಗ್ಯೆ ನೀವು ನಿಮ್ಮ ಯೇಸು ಕ್ರಿಸ್ತ ನನ್ನು ಕುರಿತು ಬಹಳ ಮಾತು ಹೇಳಿ, ವಿಗ್ರಹಾರಾಧನೆಗೆ ವಿರೋಧವಾಗಿ ಪ್ರಸಂಗ ಮಾಡಿದಿರಲ್ಲ? ಆ ಮಾತಿ

ಗೂ ಈ ಜಾತಿವಿಷಯವಾದ ಮಾತಿಗೂ ಏನು ಸಂಬಂಧ?

ಸುವಾ. ಆ ಮಾತೂ ಈ ಮಾತೂ ಒಂದೇ. ಜಾತಿಯ ಮೋಸವು ಹೋದರೆ, ವಿಗ್ರಹಾರಾಧನೆಯ ಮೋಸ ಸಹ ಹೋಗುವದು. ಯೇಸು ಕ್ರಿಸ್ತನಲ್ಲಿ ವಿಶ್ವಾಸಿಸುವವರು ಈ ಎರಡು ಮೋಸಗಳಿಂದಲೂ ಒಮ್ಮೆಯೇ ಬಿಡುಗಡೆಯಾಗುತ್ತಾರೆ. ಆತನು ಮನುಷ್ಯರಿಗೆ ಸತ್ಯ ದೇವರ ಸತ್ಯ ಆರಾಧನೆಯನ್ನೂ, ತಮ್ಮೊಳಗೂ ದೇವರ ಸಂಗಡಲೂ ಐಕ್ಯವನ್ನೂ ಸ್ಥಾಪಿಸುವದಕ್ಕೆ ಪಾಪಿಷ್ಟರಾದ ಮನುಷ್ಯರ ರಕ್ಷಕನಾಗಿ, ಪಾಪಪರಿಹಾರಕ್ಕೋಸ್ಕರ ಅಸಹ್ಯವಾದ ಮರಣವನ್ನು ಹೊಂದಿದನು. ಆತನ ಆಜ್ಞೆಯ ಪ್ರಕಾರವಾಗಿ ನಾವು ಈ ಅಂತ್ಯಕಾಲದಲ್ಲಿ ನಿಮಗೂ ಭೇದದಲ್ಲಿಯೂ ದೂರದಲ್ಲಿಯೂ ಇರುವವರೆಲ್ಲರಿಗೂ ಸಮಾಧಾನದ ಸುವಾರ್ತೆಯನ್ನು ಸಾರಿ ಹೇಳುವದಕ್ಕೆ ಈ ದೇಶಕ್ಕೆ ಬಂದೆವು. ನೀವು ಆತನಲ್ಲಿ ನಂಬಿಕೆ ಇಟ್ಟು ದೇವರ ಮನೆತನವೆಂಬ ಉತ್ತಮ ಜಾತಿಯಲ್ಲಿ ಶೇರಿ ಆತನ ಆತ್ಮವನ್ನು ಹೊಂದಿದರೆ, ಸತ್ಯದ್ವಿಜರಾಗುವಿರಿ.

ದೇವ. ಆಚಾರ್ಯರೇ, ಸಿಕ್ಕಿತು, ಸಿಕ್ಕಿತು! ಇಲ್ಲಿ ಬರದದೆ ಕೇಳಿರಿ. ಯೇಸು ಕ್ರಿಸ್ತನು ನಮ್ಮ ಸಮಾಧಾನವಾ

ಗಿದ್ಧಾನೆ. ಆತನು ಎರಡಾಗಿದ್ದದ್ದನ್ನು ಒಂದಾಗ ಮಾಡಿ, ಅಡ್ಡಿಯಾದ ನಡುಗೋಡೆಯಾದ ಬೇಲಿಯನ್ನು ಬಿಚ್ಚಿ, ವಿರುದ್ಧವನ್ನು ತನ್ನ ಮಾಂಸದಲ್ಲಿ ಹೀನ ಮಾಡಿ, ಕಟ್ಟಳೆಗಳ ನೇಮವನ್ನು ಪ್ರೀತಿಯ ಪ್ರಮಾಣದಿಂದ ತೆಗದು ಹಾಕಿ, ಆ ಎರಡಾಗಿದ್ದವರನ್ನು ತನ್ನಲ್ಲಿ ಒಂದೇ ಹೊಸ ಮನುಷ್ಯನಾಗಿ ನಿರ್ಮಿಸುವದಕ್ಕಾಗಿ, ಸಮಾಧಾನವನ್ನು ಉಂಟು ಮಾಡಿದ್ಧಾನೆ. ಧೊರೆಯೇ, ನಾನು ಸರಿಯಾಗಿ ಹೇಳಿದೆನೋ?

ಸುವಾ. ಚನ್ನಾಗಿ ಹೇಳಿದೆ. ಯೇಸು ಕ್ರಿಸ್ತನಲ್ಲಿ ವಿಶ್ವಾಸಿಸುವವರು ಪಾಪದಿಂದುಂಟಾದ ಸಕಲ ಭೇದವಾದ ನೇಮ ಮರ್ಯಾದೆಗಳಿಂದ ರಕ್ಷಿಸಲ್ಪಟ್ಟು, ದೇವರ ಸಮಾಧಾನದಿಂದ ಐಕ್ಯವಾಗಿರುವ ಒಂದೇ ಶರೀರವಾಗಿರುತ್ತಾರೆ.

ಕೃಷ್ಣಾ. ನಾನು ಹೋಗುತ್ತೇನೆ. ಈ ಮಾತೂ ಬೇಡ, ನಿಮ್ಮ ಶಾಸ್ತ್ರವೂ ಬೇಡ; ಇದೆಲ್ಲಾ ಮೋಸವೇ ಸರಿ. ಬ್ರಾಹ್ಮಣರ ಮಾತು ಖರೆ; ಬ್ರಾಹ್ಮಣರ ಮಾರ್ಗ ಉತ್ತಮವಾದದ್ದು. ನಿಮಗೆ ಜಾತಿ ಇಲ್ಲದಿರುವದರಿಂದ ಹೊಟ್ಟೆಕಿಚ್ಚಿನಿಂದ ಹೀಗೆ ಮಾತಾಡುತ್ತೀರಿ. ಮ್ಲೇಂಛರೇ! ನಾರಾಯಣಾ, ನಾರಾಯಣಾ!

ಸುವಾ. ಶಿಟ್ಟು ಮಾಡ ಬೇಡಿರಿ. ಒಂದು ಕ್ಷಣ ನಿಲ್ಲಿರಿ. ನಾನು ನಿಮ್ಮ ಪುರಂದರದಾಸನ ಪದಗಳಲ್ಲಿ ಒಂದು ಹೇಳುತ್ತೇನೆ. ಆತನು ನಮ್ಮ ಹಾಗೇ ಒಂದು ಮಾತು ಹೇಳಿದ್ಧಾನೆ.

ಕೃಷ್ಣಾ. ಆ ಪುರಂದರದಾಸನು ಪರಮಭಕ್ತನು. ಅವನ ಪದಗಳು ನಿಮಗೆ ಬರುತ್ತವೆಯೋ? ಬಂದರೆ, ನಿಮ್ಮ ಬುದ್ಧಿ ನಮಗೆ ಬೇಡೆಂದೂ, ನಮ್ಮಲ್ಲಿ ಬೇಕಾದಷ್ಟು ದಿವ್ಯ ಜ್ಞಾನಿಗಳು ಇದ್ಧಾರೆಂದೂ ತಿಳಿದು ಕೊಳ್ಳ ಬಹುದು.

ಸುವಾ. ಅವನ ಪದ ಹೇಳುತ್ತೇನೆ. ಬ್ರಾಹ್ಮಣರ ಮಾರ್ಗವು ಉತ್ತಮವಲ್ಲವೆಂದು ಅದರಲ್ಲಿ ಪ್ರತ್ಯಕ್ಷವಾಗಿದೆ.

ನೇಮ ನಿಷ್ಟೆಯ ಮಾಡುವಿರಲ್ಲ?
ತಾಮಸ ಬಿಡಲಿಲ್ಲ!
ಆರೊಂದರಿಯದಾಗಮ ತಿಳಿಯದೆ,
ನರಕದ ಕುಣಿಯಲಿ ಬೀಳುವಿರಲ್ಲ?
ಎಲ್ಲನು ಬಲ್ಲೆನೆಂಬುವಿರಲ್ಲ?
ಅವಗುಣ ಬಿಡಲಿಲ್ಲ!
ಕಾಷಾಯವನ್ನುಟ್ಟು ತಿರುಗುವಿರಲ್ಲ?
ಕಾಮವ ಬಿಡಲಿಲ್ಲ!

ಬ್ರಹ್ಮಜ್ಞಾನವ ಹೇಳುವಿರಲ್ಲ?
ಹಮ್ಮನು ಬಿಡಲಿಲ್ಲ!

ಕೃಷ್ಣಾ. ಛೀ ಛೀ! ನೀವು ಎಲ್ಲಾ ಹಾಳು ಮಾಡುವದೇ ಸರಿ. ಮೋಸವೇ ಮೋಸ! ನಾರಾಯಣಾ, ನಾರಾಯಣಾ!

ಲಿಂಗ. ಓ ಹೋ, ಆ ಹಾರುವ ಶಿಟ್ಟಿನಿಂದ ಎದ್ದು ಹೋದನು. ಹೋಗಲಿ. ನಿಮ್ಮ ಮಾತು ಖರೆ. ಬಡವನಾದ ನನಗೆ ಉಪಕಾರ ಮಾಡಿದಿರಿ. ಜೀವ ಬಂತು. ಈ ಶೀಳು ಹಾದಿಯಿಂದ ಊರಿಗೆ ಹೋಗುತ್ತೇನೆ. ನೀವು ಎಲ್ಲಿ ಹೋಗುತ್ತೀರಪ್ಪಾ?

ಸುವಾ. ಹುಬ್ಬಳ್ಳಿಗೆ ಹೋಗಲಿಕ್ಕೆ ಹೊರಟೆನು. ದೇವರ ಚಿತ್ತವಾದರೆ, ಹತ್ತು ಹದಿನೈದು ದಿವಸದೊಳಗೆ ಅಲ್ಲಿ ಮುಟ್ಟುವೆನು.

ಲಿಂಗ. ಬರುತ್ತೇನೆ, ಬರುತ್ತೇನೆ! ಮಕ್ಕಳನ್ನು ಅಣ್ಣನ ಮನೆಯಲ್ಲಿ ಬಿಟ್ಟು ಅಲ್ಲಿ ಬರುತ್ತೇನೆ.

ಸುವಾ. ಮತ್ತು ದೇವ. ಸಲಾಂ, ಸಮಾಧಾನದಿಂದ ಹೋಗಿ ಬನ್ನಿರಿ.

ಸುವಾ. ದೇವದತ್ತನೇ, ಬಾ; ಬಂಗಲೆ ಹತ್ತರವಾಯಿತು, ಹೋಗೋಣ!

ದೇವ. ನೋಡಿರಿ, ಆ ಬ್ರಾಹ್ಮಣನು ಕೆಳಗೆ ಇಳಿದು ನಡೆದು ಹೋಗುತ್ತಾನೆ. ಈಗ ಮೋಡಗಳು ಎಲ್ಲಾ ಹೋದವು, ನಿರ್ಮಲವಾಯಿತು.

ಸುವಾ. ನೀತಿಯ ಸೂರ್ಯನು ಈ ದೇಶದ ಮೇಲೆ ಎಲ್ಲಾ ಕಡೆಯಲ್ಲಿಯೂ ಪ್ರಕಾಶಿಸುವಂಥಾದ್ದು ತ್ವರೆಯಾಗಿ ಆಗಲಿ! ಕರ್ತನೇ, ಹೀಗಾಗಲಿ!

— ಸಮಾಪ್ತಿ. —



# ON CASTE

# ಜಾತಿವಿಚಾರಣೆಯು

ಮೂರನೇ ಛಾಪೆ.



MANGALORE
PRINTED BY STOLZ & REUTHER, BASEL MISSION PRESS.
1869 